# ವೇಣು ಗಾನ ಲಹರಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಪ್ರಯುಕ್ತ ಆಗಸ್ಟ್ 28, ಶುಕ್ರವಾರ ಸಂಜೆ 6-30ಕ್ಕೆ ವೇಣು ಗಾನ ಲಹರಿ. ವೇಣು ವಾದನ : ಶ್ರೀ ಆನಂದತೀರ್ಥ, ಗಾಯನ : ಕು|| ಅವನಿ ಭಟ್, ಕೀಬೋರ್ಡ್ : ಶ್ರೀ ಟಿ.ಎಸ್. ರಮೇಶ್, ತಬಲಾ : ಶ್ರೀ ಪ್ರಮಥ್ ವಿಠಲ್, ಬುಲ್ ಬುಲ್ ತರಂಗ್ : ಶ್ರೀ ಪೂರ್ಣಪ್ರಸಾದ್, ರಿದಮ್ ಪಾಡ್ : ಶ್ರೀ ಗುರುರಾಜ್. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ 6ನೇ ಅಡ್ಡರಸ್ತೆ, ಪ್ರಕಾಶನಗರ, ಬೆಂಗಳೂರು-560021

# ರಸ್ತೆ ದುರಸ್ಥಿ ಕುರಿತು ಧ್ವನಿ ಎತ್ತಿದ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ

• ಉದಯವಾಹಿನಿ, ಬೆಂಗಳೂರು

ಆನೇಕಲ್ ವಿಧಾನಸಭಾ ಕ್ಷೇತ್ರದ ರಸ್ತೆಗಳ ದುಸ್ಥಿತಿಯ ಕುರಿತು ಬಯೋಕಾನ್ ಸಂಸ್ಥೆಯ ಮುಖ್ಯಸ್ಥೆ ಕಿರಣ್ ಮಜುಂದಾರ್-ಷಾ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದು, ಈ ಕುರಿತು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳ ನಡುವೆ ತೀವ್ರ ಚರ್ಚೆ ಆರಂಭವಾಗಿದೆ.

ನೂತನವಾಗಿ ನಿರ್ಮಿಸಿದ ರಸ್ತೆಗಳು ಕೇವಲ 6 ತಿಂಗಳಲ್ಲೇ ಹಾಳಾಗುತ್ತಿದ್ದು, ಸಾರ್ವಜನಿಕರ ತೆರಿಗೆ ಹಣ ವ್ಯರ್ಥವಾಗುತ್ತಿದೆ ಎಂದು ಕಿರಣ್ ಮಜುಂದಾರ್ ಶಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರದಿಂದ ಅನುದಾನ ಸಿಕ್ಕರೂ ಅದನ್ನು ಇತರ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಆನೇಕಲ್ ಶಾಸಕ ಬಿ. ಶಿವಣ್ಣ ಅವರು ಈ ಆರೋಪಗಳಿಗೆ ಪ್ರತಿಕ್ರಿಯಿಸಿ, ಸರ್ಕಾರದಿಂದ ಸಿಗುವ ಅನುದಾನ


ಉದಯವಾಹಿನಿ ಚಿತ್ರ

ಸೀಮಿತವಾಗಿದ್ದು, ಮಳೆಯಿಂದಾಗಿ ರಸ್ತೆಗಳು ಪದೇ ಪದೇ ಹಾಳಾಗುತ್ತಿವೆ ಎಂದು ಹೇಳಿದ್ದಾರೆ. ರಸ್ತೆಗಳ ದುರಸ್ತಿಗೆ ಸರ್ಕಾರಿ ಅನುದಾನವನ್ನೇ ಕಾಯುವ ಬದಲು ಸ್ಥಳೀಯವಾಗಿರುವ ಪ್ರಮುಖ ಕಂಪನಿಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ. ಶಾಸಕರ ಈ ನಡೆಗೆ ತೆರಿಗೆದಾರರು ಹಾಗೂ ಉದ್ಯಮಿ ಮೋಹನ್‌ದಾಸ್ ಪೈ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರು ಭಾರಿ ಪ್ರಮಾಣದ ತೆರಿಗೆ ಪಾವತಿಸುತ್ತಿದ್ದರೂ ಕನಿಷ್ಠ ಮೂಲಸೌಕರ್ಯ ಸಿಗುತ್ತಿಲ್ಲ ಹಾಗೂ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಮತ್ತು ಕಳಪೆ ನಿರ್ವಹಣೆ ಎದ್ದು ಕಾಣುತ್ತಿದೆ ಎಂದು ಮೋಹನ್‌ದಾಸ್ ಪೈ ಹಾಗೂ ಸ್ಥಳೀಯ ನಿವಾಸಿಗಳು ಖಂಡಿಸಿದ್ದಾರೆ.

ಸಾಲು ಸಾಲು ಮಳೆಯಿಂದಾಗಿ ರಸ್ತೆಗಳು ಮತ್ತಷ್ಟು ಗುಂಡಿಮಯವಾಗುತ್ತಿದ್ದು, ಸರ್ಕಾರವು ಕಾಮಗಾರಿಗಳ ಗುಣಮಟ್ಟದ ಮೇಲೆ ಕಟ್ಟುನಿಟ್ಟಿನ ಉಸ್ತುವಾರಿ ವಹಿಸಬೇಕು ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

## ಸಿದ್ದರಾಮಯ್ಯ ನನ್ನನ್ನು ಮುಖ್ಯಮಂತ್ರಿ ಹುದ್ದೆಗೆ ಶಿಫಾರಸು ಮಾಡಿದ್ದರು, ಆದರೆ ಹೈಕಮಾಂಡ್ ಸ್ಕೀಮ್ ಬೇರೆಯೇ ಇತ್ತು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸಿದ್ದರಾಮಯ್ಯ ನನ್ನ ಹೆಸರನ್ನು ಮುಖ್ಯಮಂತ್ರಿ ಹುದ್ದೆಗೆ ಶಿಫಾರಸು ಮಾಡಿದ್ದರು, ಆದರೆ ಹೈಕಮಾಂಡ್ ಸ್ಕೀಮ್ ಬೇರೆಯೇ ಇತ್ತು ಎಂದು ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪರಮೇಶ್ವರ್ ಅವರನ್ನು ಉಪಮುಖ್ಯಮಂತ್ರಿ ಮಾಡಿದ್ದು ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದರು, ಸಿದ್ದರಾಮಯ್ಯ ಮತ್ತು ನಾನು ಹಲವು ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ. ನಾನು 8 ವರ್ಷಗಳ ಕಾಲ ಪಿಸಿಸಿ ಅಧ್ಯಕ್ಷನಾಗಿದ್ದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ. ನಂತರ ನಾನು 2015 ರಲ್ಲಿ ಗೃಹ ಸಚಿವರಾಗಿ ಅವರ ಸಂಪುಟಕ್ಕೆ ಸೇರಿದೆ. 2023 ರಲ್ಲಿ ನಾನು ಅವರ ಮಂತ್ರಿ ಮಂಡಲ ಸೇರಿದೆ. ನಾವು ಒಟ್ಟಿಗೆ ಕೆಲಸ ಮಾಡಿದ್ದೇವೆ, ಅವರಿಗೆ ನನ್ನ ಬಗ್ಗೆ ಚೆನ್ನಾಗಿ ತಿಳಿದಿದೆ ಎಂದಿದ್ದಾರೆ. ನಿನ್ನೆ ಅವರು ನನ್ನನ್ನು ಸಿಎಂ ಹುದ್ದೆಗೆ ಶಿಫಾರಸು ಮಾಡಿದ್ದಾರೆಂದು ಹೇಳಿದ್ದರಲ್ಲಿ ನನಗೆ ಆಶ್ಚರ್ಯವಿಲ್ಲ. ನಾಲ್ಕೈದು ಉಪಮುಖ್ಯ ಮಂತ್ರಿಗಳನ್ನು ಮಾಡುವ ಯೋಜನೆಯಿತ್ತು, ಆದರೆ ಸಿದ್ದರಾಮಯ್ಯ ಅವರು ಕೇವಲ ಒಬ್ಬರಿಗೆ ಡಿಸಿಎಂ ಹುದ್ದೆ ನೀಡಬೇಕೆಂದು ಹೇಳಿ ನನ್ನ ಹೆಸರನ್ನು ಹೈಕಮಾಂಡ್ ಬಳಿ ಶಿಫಾರಸು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಕೇಂದ್ರಕ್ಕೆ ಬರ ಅಧ್ಯಯನಕ್ಕೆ ಮನವಿ ಸಲ್ಲಿಸುವ ವಿಚಾರದ ಬಗ್ಗೆ ಮಾತನಾಡಿದ ಡಿಸಿಎಂ ಪರಮೇಶ್ವರ್, ಕೇಂದ್ರ ಸರ್ಕಾರದ 2020ರ ಮಾರ್ಗಸೂಚಿ ಪ್ರಕಾರವೇ ಬರ ಪೀಡಿತ ಪ್ರದೇಶ ಘೋಷಿಸಬೇಕಾಗುತ್ತದೆ. ಸದ್ಯ 102ತಾಲ್ಲೂಕುಗಳಲ್ಲಿ ನಿಯಮದಡಿ ವರದಿ ಬಂದಿದ್ದು, ವಸ್ತುಸ್ಥಿತಿ ಅಧ್ಯಯನ ನಡೆಸಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಸಚಿವ ಸಂಪುಟದಲ್ಲಿ ಚರ್ಚಿಸಿ, ಕೇಂದ್ರಕ್ಕೆ ಅಧಿಕೃತ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

## 37 ವರ್ಷಗಳ ಬಳಿಕ ರಾಜ್ಯದಲ್ಲಿ ವಿದ್ಯಾರ್ಥಿ ಚುನಾವಣೆ: ಆದರೆ, ಕ್ಯಾಂಪಸ್ ರಾಜಕೀಯಕ್ಕೆ ಬ್ರೇಕ್!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಪದವಿಪೂರ್ವ (ಕಗ) ಮತ್ತು ಪದವಿ ಕಾಲೇಜುಗಳಲ್ಲಿ ಸುಮಾರು 37 ವರ್ಷಗಳ ಸುದೀರ್ಘ ನಿಷೇಧದ ಬಳಿಕ ವಿದ್ಯಾರ್ಥಿ ಸಂಘದ (ಯೂನಿಯನ್) ಚುನಾವಣೆಗಳನ್ನು ಮರುಸೃಷ್ಟಿಸಲು ರಾಜ್ಯ ಸರ್ಕಾರ ಅಧಿಕೃತವಾಗಿ ನಿರ್ಧರಿಸಿದೆ. ಈ ಬಗ್ಗೆ, ವಿಕಾಸಸೌಧದಲ್ಲಿ ಮಾತನಾಡಿದ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ್, ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವದ ಗುಣಗಳು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಈ ಜೆನ್‌ಝೀ ತಲೆಮಾರಿನ ಚುನಾವಣೆಗಳನ್ನು ಮರುಜಾರಿಗೊಳಿಸಲಾಗುತ್ತಿದೆ ಎಂದು ತಿಳಿಸಿದರು. ಕಾಲೇಜು ಕ್ಯಾಂಪಸ್‌ಗಳಲ್ಲಿ ಹೆಚ್ಚುತ್ತಿದ್ದ ಹಿಂಸಾಚಾರ, ಗೂಂಡಾಗಿರಿ ಮತ್ತು ರಾಜಕೀಯ ಹಸ್ತಕ್ಷೇಪದ ಹಿನ್ನೆಲೆಯಲ್ಲಿ 1989ರಲ್ಲಿ ಆಗಿನ ವೀರೇಂದ್ರ ಪಾಟೀಲ್ ನೇತೃತ್ವದ ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ಸಂಪೂರ್ಣವಾಗಿ ನಿಷೇಧಿಸಿತ್ತು. ಆದರೆ, ಪ್ರಸ್ತುತ ಡಿಕೆ ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರವು, ದೀರ್ಘಕಾಲದ ನಿಷೇಧವನ್ನು ತೆರವುಗೊಳಿಸಿ ಇದೇ ಶೈಕ್ಷಣಿಕ ವರ್ಷದಿಂದಲೇ ಹಂತಹಂತವಾಗಿ ಚುನಾವಣೆ ನಡೆಸಲು ಮುಂದಾಗಿದೆ. ಈ ಬಗ್ಗೆ ಮುಂದಿನ 15 ದಿನಗಳ ಒಳಗಾಗಿ ಇದಕ್ಕೆ ಸಂಬಂಧಿಸಿದ ಅಧಿಕೃತ ಸರ್ಕಾರಿ ಆದೇಶ ಹೊರಬೀಳಲಿದೆ. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಲ್ಲಿ ಮೊದಲ ಹಂತದಲ್ಲಿ ಚುನಾವಣೆಗಳು ಜರುಗಲಿವೆ. ಮೊದಲ ಹಂತದ ಯಶಸ್ಸನ್ನು ನೋಡಿಕೊಂಡು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಇದನ್ನು ವಿಸ್ತರಿಸಲಾಗುವುದು. ತದನಂತರ ಪ್ರತಿ ವರ್ಷವೂ ಏಕಕಾಲಕ್ಕೆ ಚುನಾವಣೆಗಳು ನಡೆಯಲಿವೆ.

ಚುನಾವಣೆಯ ನೆಪದಲ್ಲಿ ಕಾಲೇಜುಗಳಲ್ಲಿ ಗಲಾಟೆ ಅಥವಾ ರಾಜಕೀಯ ಪ್ರಭಾವ ಉಂಟಾಗದಂತೆ ತಡೆಯಲು ಸಚಿವ ಶರಣಪ್ರಕಾಶ ಪಾಟೀಲ್ ಹಲವು ಕಠಿಣ ನಿಯಮಗಳನ್ನು ಜಾರಿಗೊಳಿಸಿದ್ದಾರೆ.

## ರಾಜ್ಯದಲ್ಲಿ ಬರಗಾಲದ ಬಿಸಿ: ಗಗನಕ್ಕೇರಿದ ಸಕ್ಕರೆ, ಈರುಳ್ಳಿ ಬೆಲೆ..!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ತೀವ್ರ ಬರಗಾಲ ಮತ್ತು ಮುಂಗಾರು ಮಳೆಯ ಅಭಾವವು ಇದೀಗ ಜನಸಾಮಾನ್ಯರ ಮೇಲೆ ಪರಿಣಾಮ ಬೀರತೊಡಗಿದೆ. ಮಾರುಕಟ್ಟೆಯಲ್ಲಿ ಸಕ್ಕರೆ ಮತ್ತು ಈರುಳ್ಳಿ ಬೆಲೆಗಳು ದಿಢೀರ್ ಗಗನಕ್ಕೇರಿದ್ದು, ಗ್ರಾಹಕರು ಕಂಗಾಲಾಗಿದ್ದಾರೆ. ಕಳೆದ ಕೆಲವು ವಾರಗಳಿಂದ ಈರುಳ್ಳಿ ಸಗಟು ದರದಲ್ಲಿ ಸರಾಸರಿ ಪ್ರತಿ ಕೆಜಿಗೆ 15 ರೂಪಾಯಿ ಏರಿಕೆಯಾಗಿದೆ. ರಾಜಧಾನಿ ಬೆಂಗಳೂರಿನ ಚಿಲ್ಲರೆ ಮಾರುಕಟ್ಟೆಗಳಲ್ಲಿ ಈ ಹಿಂದೆ 20 ರಿಂದ 30 ರೂಪಾಯಿ ಇದ್ದ ಒಂದು ಕೆಜಿ ಈರುಳ್ಳಿ ಬೆಲೆ, ಇದೀಗ 40 ರಿಂದ 52 ರೂಪಾಯಿ ತಲುಪಿದೆ.

ಮಳೆ ಕೈಕೊಟ್ಟಿದ್ದರಿಂದ ಬಿತ್ತನೆ ಕುಂಠಿತಗೊಂಡಿರುವುದು ಮತ್ತು ನೆರೆ ರಾಜ್ಯ ಮಹಾರಾಷ್ಟ್ರದಲ್ಲೂ ಬೆಳೆ ಹಾನಿಯಾಗಿರುವುದು ಈರುಳ್ಳಿ ಅಭಾವಕ್ಕೆ ಮುಖ್ಯ ಕಾರಣವಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಸಲಹೆಗಾರ ರಮೇಶ್ ಚಂದ್ರ ಲಾಹೋಟಿ ಮಾತನಾಡಿ, ಆಗಸ್ಟ್ ತಿಂಗಳಲ್ಲಿ ಸಕ್ಕರೆಯ ಸಗಟು ಬೆಲೆ ನಿರಂತರವಾಗಿ ಏರಿಕೆಯಾಗಿದ್ದು, ರೂ.45ರಿಂದ ಇದೀಗ ರೂ.63ಕ್ಕೆ ತಲುಪಿದೆ ಎಂದು ತಿಳಿಸಿದ್ದಾರೆ. ಮುಂಗಾರು ಅವಧಿಯಲ್ಲಿ ಮಳೆ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯೇ ಬೆಲೆ ಏರಿಕೆಗೆ ಪ್ರಮುಖ ಕಾರಣ ಎಂದು ಅವರು ಹೇಳಿದ್ದಾರೆ.

## ವಿದೇಶಿಗರ ಅಕ್ರಮ ವಾಸ್ತವ್ಯಕ್ಕೆ ಸರ್ಕಾರ ಬ್ರೇಕ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವ ವಿದೇಶಿ ಪ್ರಜೆಗಳ ವಿರುದ್ಧ ಕಠಿಣ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಡ್ರಗ್ಸ್ ಪ್ರಕರಣಗಳು ಸೇರಿದಂತೆ ವಿವಿಧ ಅಪರಾಧಗಳಲ್ಲಿ ಆರೋಪ ಎದುರಿಸುತ್ತಿರುವ 365 ವಿದೇಶಿಗರ ಪ್ರಕರಣಗಳನ್ನು ಪರಿಶೀಲಿಸಲಾಗುತ್ತಿದ್ದು, ಅರ್ಹ ಪ್ರಕರಣಗಳನ್ನು ಹಿಂಪಡೆದು ಅವರನ್ನು ತಾಯ್ನಾಡಿಗೆ ಗಡಿಪಾರು ಮಾಡುವ ಪ್ರಕ್ರಿಯೆಗೆ ಸರ್ಕಾರ ಸಿದ್ಧತೆ ನಡೆಸಿದೆ. ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿದುಬಂದಿದೆ. ಗೃಹ ಇಲಾಖೆಯ ಪ್ರಕಾರ, ಕರ್ನಾಟಕದಲ್ಲಿ 365 ವಿದೇಶಿ ಪ್ರಜೆಗಳ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಇ ಈ ಪ್ರಕರಣಗಳಲ್ಲಿ 2 ಕೊಲೆ ಪ್ರಕರಣಗಳು, 2 ಕೊಲೆ ಯತ್ನ ಪ್ರಕರಣಗಳು, ವಿದೇಶಿಗರ ಕಾಯ್ದೆಯಡಿ 26 ಪ್ರಕರಣಗಳು, ಲೈಂಗಿಕ ದೌರ್ಜನ್ಯದ 3 ಪ್ರಕರಣಗಳು, ಮಾನವ ಸಾಗಣೆಯ 14 ಪ್ರಕರಣಗಳು, ಕಳ್ಳತನದ 14 ಪ್ರಕರಣಗಳು, ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ 2 ಪ್ರಕರಣಗಳು ಹಾಗೂ ಸುಲಿಗೆಗೆ ಸಂಬಂಧಿಸಿದ 2 ಪ್ರಕರಣಗಳು ಸೇರಿವೆ. ಇವುಗಳ ಹೊರತಾಗಿಯೂ ಹಲವು ಇತರ ಅಪರಾಧ ಪ್ರಕರಣಗಳಿವೆ.

# ಸಿಲಿಕಾನ್ ಸಿಟಿಯ ಲೈಫ್‌ಲೈನ್‌ಗೆ ಏನಾಗುತ್ತಿದೆ?

### 2026ರ ಜುಲೈವರೆಗೆ ನೇರಳೆ ಮಾರ್ಗದಲ್ಲಿ 5, ಹಸಿರು ಮಾರ್ಗದಲ್ಲಿ 6 ಹಾಗೂ ಹಳದಿ ಮಾರ್ಗದಲ್ಲಿ 4 ತಾಂತ್ರಿಕ ವ್ಯತ್ಯಯಗಳು ದಾಖಲಾಗಿವೆ.

• ಉದಯವಾಹಿನಿ, ಬೆಂಗಳೂರು

1 ಹಸಿರು ಮಾರ್ಗ 6 ಬಾರಿ
2 ನೇರಳೆ ಮಾರ್ಗ 5 ಬಾರಿ
3 ಹಳದಿ ಮಾರ್ಗ 4 ಬಾರಿ

ಸಿಲಿಕಾನ್ ಸಿಟಿಯ ಲೈಫ್‌ಲೈನ್ ಎಂದೇ ಹೆಸರಾಗಿರುವ ನಮ್ಮ ಮೆಟ್ರೋ ಇತ್ತೀಚಿನ ದಿನಗಳಲ್ಲಿ ಪದೇ ಪದೇ ಕೈಕೊಡುತ್ತಿದ್ದು, ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕಳೆದ ಸೆಪ್ಟೆಂಬರ್ 2025ರಿಂದ ಜುಲೈ 2026 ರ ನಡುವಿನ ಕೇವಲ 10 ತಿಂಗಳ ಅವಧಿಯಲ್ಲಿ ಮೆಟ್ರೋ ರೈಲು ಸಂಚಾರದಲ್ಲಿ ಬರೋಬ್ಬರಿ 15 ಬಾರಿ ತಾಂತ್ರಿಕ ವ್ಯತ್ಯಯ ಉಂಟಾಗಿರುವುದು ಬೆಳಕಿಗೆ ಬಂದಿದೆ. ವಿಧಾನ ಪರಿಷತ್ತಿನಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು, ಈ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದ್ದಾರೆ. ಮೆಟ್ರೋ ಹಳಿಗಳ ಮೂಲಸೌಕರ್ಯ, ವಿದ್ಯುತ್ ಸರಬರಾಜು ಮತ್ತು ರೈಲು ಕೋಚ್‌ಗಳಲ್ಲಿನ ಗಂಭೀರ ಲೋಪಗಳೇ ಈ ಸರಣಿ ಅಪಘಾತ ಹಾಗೂ ವಿಳಂಬಕ್ಕೆ ಮುಖ್ಯ ಕಾರಣ ಎಂದು ಅವರು ತಿಳಿಸಿದ್ದಾರೆ.

2025ರ ಸೆಪ್ಟೆಂಬರ್‌ನಿಂದ 2026ರ ಜುಲೈವರೆಗೆ ನೇರಳೆ ಮಾರ್ಗದಲ್ಲಿ 5, ಹಸಿರು ಮಾರ್ಗದಲ್ಲಿ 6 ಹಾಗೂ ಹಳದಿ ಮಾರ್ಗದಲ್ಲಿ 4 ತಾಂತ್ರಿಕ ವ್ಯತ್ಯಯಗಳು ದಾಖಲಾಗಿವೆ ಎಂದು ಹೇಳಿದ್ದಾರೆ.

ಇವುಗಳಲ್ಲಿ ಕೆಲವು ಪ್ರಮುಖ ಘಟನೆಗಳು ಪ್ರಯಾಣಿಕರಿಗೆ ಭಾರೀ ತೊಂದರೆ ಉಂಟುಮಾಡಿವೆ. ಜೂನ್ 23ರಂದು ನೇರಳೆ ಮಾರ್ಗದಲ್ಲಿ ಮೂರನೇ ರೈಲು ಹಳಿಯ ವ್ಯವಸ್ಥೆಯಲ್ಲಿ ಉಂಟಾದ ಅಸಮರ್ಪಕ ಹೊಂದಾಣಿಕೆಯಿಂದ ಸಂಜೆ ಗರಿಷ್ಠ ಸಂಚಾರದ ಅವಧಿಯಲ್ಲಿ ಐದು ಗಂಟೆಗಳಿಗೂ ಹೆಚ್ಚು ಕಾಲ ಮೆಟ್ರೋ ಸೇವೆ ಸ್ಥಗಿತಗೊಂಡಿತ್ತು. ಅದೇ ರೀತಿ, ಜುಲೈ 21ರಂದು ಹಸಿರು ಮಾರ್ಗದಲ್ಲಿ ರಕ್ಷಣಾ ವಿದ್ಯುತ್ ವಲಯ ಸಕ್ರಿಯಗೊಂಡ ಪರಿಣಾಮ ಮೂರನೇ ರೈಲು


ಉದಯವಾಹಿನಿ ಚಿತ್ರ

ಹಳಿಯ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಇದರಿಂದ ಬೆಳಗಿನ ಗರಿಷ್ಠ ಸಂಚಾರದ ಅವಧಿಯಲ್ಲಿ 51 ನಿಮಿಷಗಳ ಕಾಲ ರೈಲುಗಳ ಸಂಚಾರ ನಿಯಂತ್ರಣ ಹಾಗೂ ಸೀಮಿತ ಮಾರ್ಗದಲ್ಲಿ ರೈಲು ಓಡಿಸುವ ವ್ಯವಸ್ಥೆ ಜಾರಿಗೊಳಿಸಲಾಗಿತ್ತು.

ಪರಿಶೀಲನೆಯ ಆಧಾರದ ಮೇಲೆ ದೋಷಪೂರಿತ ಘಟಕಗಳನ್ನು ಬದಲಾಯಿಸಲಾಗುತ್ತದೆ. ಅಲ್ಲದೆ, ಆಯಾ ವ್ಯವಸ್ಥೆಗಳಿಗೆ ಅಗತ್ಯವಿರುವ ಸರಿಪಡಿಸುವ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಈ ಕ್ರಮಗಳ ಪರಿಣಾಮಕಾರಿತ್ವವನ್ನು ವೈಫಲ್ಯಗಳ ಮಾಹಿತಿ ಹಾಗೂ ಅವು ಮರುಕಳಿಸುವ ಪ್ರಮಾಣದ ಆಧಾರದ ಮೇಲೆ ನಿರಂತರವಾಗಿ ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದಾರೆ.ಆದರೆ, ಉಚಿತ ಬಸ್ ಸೇವೆ ಒದಗಿಸುವ ಕಡ್ಡಾಯ ವ್ಯವಸ್ಥೆ ಅಥವಾ ಬಸ್ ನಿಯೋಜನೆಗೆ ನಿಗದಿತ ಸಮಯದ ಮಿತಿ ಇಲ್ಲ ಎಂಬುದು ಉತ್ತರದಿಂದ ಸ್ಪಷ್ಟವಾಗಿದೆ.ಸೇವೆಯಲ್ಲಿ ವ್ಯತ್ಯಯ ಉಂಟಾದ ನಿಲ್ದಾಣಗಳ ಎರಡೂ ಬದಿಗಳಲ್ಲಿ ಸಾಧ್ಯವಾದಷ್ಟು ಸೀಮಿತ ಮಾರ್ಗದ ರೈಲು ಸೇವೆ ಒದಗಿಸುವ ಮೂಲಕ ಪ್ರಯಾಣಿಕರು ವ್ಯತ್ಯಯಗೊಂಡ ಭಾಗದಾಚೆಗಿನ ತಮ್ಮ ಗಮ್ಯಸ್ಥಾನ ತಲುಪಲು ಸಹಾಯ ಮಾಡಲಾಗುತ್ತದೆ. ನಿಲ್ದಾಣಗಳಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಮಾಹಿತಿ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. ರೈಲುಗಳು ಅಥವಾ ನಿಲ್ದಾಣಗಳಲ್ಲಿ ತುರ್ತು ಪರಿಸ್ಥಿತಿ ಎದುರಾದರೆ ಪ್ರಯಾಣಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ತುರ್ತು ಹಾಗೂ ವಿಪತ್ತು ನಿರ್ವಹಣಾ ಕಾರ್ಯವಿಧಾನಗಳನ್ನು ಬಿಎಂಆರ್‌ಸಿಎಲ್ ರೂಪಿಸಿದೆ ಎಂದು ಸಚಿವರು ಹೇಳಿದ್ದಾರೆ. ಬೆರಟೆನ ಅಗ್ರಹಾರದಲ್ಲಿ ರೈಲಿನಲ್ಲಿ ಯಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ರೈಲನ್ನು ಅಲ್ಲಿಯೇ ಕೊನೆಗೊಳಿಸಲಾಯಿತು. ಪ್ರಯಾಣಿಕರನ್ನು ಬಳಿಕ ಬಂದ ಮತ್ತೊಂದು ರೈಲಿಗೆ ಸ್ಥಳಾಂತರಿಸಲಾಯಿತು.

> ಪ್ರಮುಖ ತಾಂತ್ರಿಕ ದೋಷಗಳ ಕುರಿತು ಬೆಂಗಳೂರು ಮೆಟ್ರೋ ರೈಲು ನಿಗಮ (ಬಿಎಂಆರ್‌ಸಿಎಲ್) ವಿವರವಾದ ವೈಫಲ್ಯ ವಿಶ್ಲೇಷಣೆ ಹಾಗೂ ಮೂಲ ಕಾರಣ ಪತ್ತೆಹಚ್ಚುವ ಪರಿಶೀಲನೆ ನಡೆಸುತ್ತದೆ ಎಂದು ತಿಳಿಸಿದ್ದಾರೆ.-ಸಚಿವರು

> ಇದೇ ವೇಳೆ ಗರಿಷ್ಠ ಸಂಚಾರದ ಅವಧಿಯಲ್ಲಿ ಮೆಟ್ರೋ ತಾಂತ್ರಿಕ ದೋಷದಿಂದ ಸೇವೆ ಸ್ಥಗಿತಗೊಂಡರೆ, ಪ್ರಯಾಣಿಕರಿಗೆ ಉಚಿತ ಅಥವಾ ಪರ್ಯಾಯ ಫೀಡರ್ ಬಸ್ ಸೇವೆ ಒದಗಿಸುವ ಕುರಿತು ಯಾವುದೇ ಕಡ್ಡಾಯ ನಿಯಮ ರೂಪಿಸಲಾಗಿದೆಯೇ ಎಂಬ ಪ್ರಶ್ನೆಗೂ ಉತ್ತರಿಸಿದ್ದಾರೆ.-ಸಚಿವರು

**ಪರ್ಯಾಯ ಬಸ್ ಸೇವೆ** ಪ್ರಮುಖ ಸೇವಾ ವ್ಯತ್ಯಯ ಉಂಟಾದ ಸಂದರ್ಭದಲ್ಲಿ ಅಗತ್ಯವಿರುವ ಕಡೆ ಬಿಎಂಟಿಸಿಯೊಂದಿಗೆ ಸಮನ್ವಯ ಸಾಧಿಸಿ ಹೆಚ್ಚುವರಿ ಅಥವಾ ಪರ್ಯಾಯ ಬಸ್ ಸೇವೆಗಳನ್ನು ಒದಗಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

## ಕಾಂಗ್ರೆಸ್ ನತ್ತ ಜಿಟಿಡಿ ಚಿತ್ತ ರಾಜ್ಯ ಸಹಕಾರ ಮಹಾ ಮಂಡಲದ ಅಧ್ಯಕ್ಷರಾಗಿ ಉಖಿ ದೇವೇಗೌಡ ಆಯ್ಕೆಗೆ ಸಿಎಂ ಡಿಕೆಶಿ ಸಹಮತ!

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸಹಕಾರ ಮಹಾ ಮಂಡಲಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ನೇತೃತ್ವದ ತಂಡ ಗೆಲುವು ಸಾಧಿಸಿದ್ದಾರೆ. ಜಿ.ಟಿ. ದೇವೇಗೌಡ ಅವರಿಗೆ ಅಧ್ಯಕ್ಷ ಸ್ಥಾನ ನೀಡುವ ವಿಚಾರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಒಪ್ಪಿಗೆ ನೀಡಿದ್ದಾರೆ. ಚುನಾವಣೆಗೂ ಮುನ್ನ ಮುಖ್ಯಮಂತ್ರಿ ನಿವಾಸದಲ್ಲಿ ಈ ಸಂಬಂಧ ಮಹತ್ವದ ಸಭೆ ನಡೆದಿತ್ತು. ಸಭೆಯಲ್ಲಿ ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು. ಜಿ.ಟಿ. ದೇವೇಗೌಡ ಅವರ ಆಯ್ಕೆಗೆ ಸಿಎಂ ಡಿಕೆಶಿ ಸಹಮತ ವ್ಯಕ್ತಪಡಿಸಿದ್ದರು.

ಹೀಗಾಗಿ ಜಿ.ಟಿ ದೇವೇಗೌಡ ಸಹಕಾರ ಮಹಾ ಮಂಡಲಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಇದೀಗ ಸಹಕಾರ ಮಹಾ ಮಂಡಲದ ಅಧ್ಯಕ್ಷ ಸ್ಥಾನ ಜಿ.ಟಿ. ದೇವೇಗೌಡ ಅವರಿಗೆ ಒಲಿದಿರುವುದು ರಾಜ್ಯ ರಾಜಕೀಯದಲ್ಲಿ ಹಲವು ಚರ್ಚೆಗಳಿಗೆ ಕಾರಣವಾಗಿದೆ. ಜೆಡಿಎಸ್‌ನಿಂದ ಇತ್ತೀಚಿನ ದಿನಗಳಲ್ಲಿ ಅಂತರ ಕಾಯ್ದುಕೊಂಡಿರುವ ಜಿ.ಟಿ. ದೇವೇಗೌಡ ಅವರು ಕಾಂಗ್ರೆಸ್ ನತ್ತ ಮುಖ ಮಾಡಲಿದ್ದಾರೆಯೇ ಎಂಬ ಪ್ರಶ್ನೆಯೂ ಮುನ್ನೆಲೆಗೆ ಬಂದಿದೆ.

ಸಹಕಾರ ಕ್ಷೇತ್ರದಲ್ಲಿ ದೀರ್ಘಾವಧಿಯ ಅನುಭವ ಹೊಂದಿರುವ ಜಿ.ಟಿ. ದೇವೇಗೌಡ ಅವರ ನೇತೃತ್ವಕ್ಕೆ ಮಂಡಲದ ನಿರ್ದೇಶಕರು


ಉದಯವಾಹಿನಿ ಚಿತ್ರ


ಬೆಂಬಲ ಸೂಚಿಸಿದ್ದಾರೆ. ಈ ಆಯ್ಕೆಯು ಸಹಕಾರ ರಂಗದಲ್ಲಿ ಅವರ ಹಿಡಿತ ಮತ್ತೊಮ್ಮೆ ಸಾಬೀತಾಗುವಂತೆ ಮಾಡಿದೆ. ಮಹಾ ಮಂಡಲದ ಅಭಿವೃದ್ಧಿಗೆ ಶ್ರಮಿಸುವುದಾಗಿ ಈ ವೇಳೆ ಜಿ.ಟಿ. ದೇವೇಗೌಡ ಭರವಸೆ ನೀಡಿದ್ದಾರೆ.

## ನಾನೀಗ ಸರ್ಕಾರದ ಮುಖ್ಯಸ್ಥನಲ್ಲ, ನನ್ನ ಬಳಿ ಅಧಿಕಾರವಿಲ್ಲ

• ಉದಯವಾಹಿನಿ, ಬೆಂಗಳೂರು

ನಾನೀಗ ಸರ್ಕಾರದ ಮುಖ್ಯಸ್ಥನಲ್ಲ, ನನ್ನ ಬಳಿ ಅಧಿಕಾರವಿಲ್ಲ. ಆದರೆ ಒಳ ಮೀಸಲಾತಿಯ ಪರವಿರುವವನು, ಮೀಸಲಾತಿ ವ್ಯವಸ್ಥೆಯ ಪರ, ಸಾಮಾಜಿಕ ನ್ಯಾಯದ ಪರ ಇರುವವನು. ಈ ವಿಚಾರದಲ್ಲಿ ಹಿಂದೆಯೂ ರಾಜಿಯಾಗಿಲ್ಲ, ಮುಂದೆಯೂ ರಾಜಿಯಾಗಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಾಮಾಜಿಕ ನ್ಯಾಯಕ್ಕಾಗಿ ಒಳ ಮೀಸಲಾತಿ ಹೋರಾಟ ಸಮಿತಿ ಆಯೋಜಿಸಿದ್ದ ಒಳ ಮೀಸಲಾತಿ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾತಿ ವ್ಯವಸ್ಥೆ ಪರಿಣಾಮವಾಗಿ ಶೋಷಣೆಗೆ ಒಳಗಾದವರಿಗೆ, ಅವಕಾಶ ವಂಚಿತರಿಗೆ ಮೀಸಲಾತಿ ಸಿಗಲೇಬೇಕು. ನಾವು ಮೂರ್ಖರಲ್ಲ, ಅವಕಾಶದಿಂದ ವಂಚಿತರಾದವರು. ನಮ್ಮ ಬುದ್ಧಿಶಕ್ತಿ ತೋರಿಸಲು ಇದುವರೆಗೆ ಅವಕಾಶ ದೊರಕಿರಲಿಲ್ಲ. ಈಗ ಆ ಅವಕಾಶವನ್ನು ಮೀಸಲಾತಿ ವ್ಯವಸ್ಥೆಯೇ ಒದಗಿಸುತ್ತಿದೆ ಎಂದರು. ಎಲ್ಲಿಯವರೆಗೆ ಸಮಾನ ಅವಕಾಶಗಳು ಸಿಗುವುದಿಲ್ಲ, ಅಲ್ಲಿಯವರೆಗೆ ಅಸಮಾನತೆ ಹೋಗುವುದಿಲ್ಲ. ಈ ಅಸಮಾನತೆ ಹೋಗಬೇಕಾದರೆ ಎಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಶಕ್ತಿ ಬರಬೇಕು ಎಂದು ಬಾಬಾ ಸಾಹೇಬರು ಹೇಳಿದ್ದರು.

ಬುದ್ಧನ ಕಾಲದಿಂದಲೂ ಇಲ್ಲಿ ಜಾತಿ ವ್ಯವಸ್ಥೆ ಇದೆ, ಅದರ ವಿರುದ್ಧ ಸುಧಾರಣಾ ಚಳವಳಿಗಳು ನಡೆಯುತ್ತಿದೆ, ಇದು ಹೋಗಬೇಕು ಎಂದು ಎಲ್ಲರೂ ಹೇಳುತ್ತಾರೆ, ಆದರೂ ಇನ್ನೂ ಜಾತಿ ಜೀವಂತವಿದೆ ಎನ್ನುವುದು ವಿಪರ್ಯಾಸ ಎಂದು ಜಾತಿ



ವ್ಯವಸ್ಥೆಯೆಡೆಗಿನ ತಮ್ಮ ಬೇಸರ ಹೊರಹಾಕಿದರು. 1949ರ ನವೆಂಬರ್ 25ರಂದು ಸಂವಿಧಾನ ಅಂಗೀಕಾರವಾಗುವ ಹಿಂದಿನ ದಿನ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದ "ನಮಗೆ ಸ್ವಾತಂತ್ರ್ಯ ಸಿಕ್ಕಿದೆ, ಸಮಾನತೆ ಎನ್ನುವುದು ಸಂವಿಧಾನದ ಆಶಯವಾಗಿದೆ. ಸಮಸಮಾಜ ನಿರ್ಮಾಣ ಆಗಲೇಬೇಕು.

ನಮಗೆ ಮತದಾನದ ಹಕ್ಕು ಕೊಟ್ಟಿದ್ದಾರೆ, ರಾಷ್ಟ್ರಪತಿಯಿಂದ ಹಿಡಿದು ಸಾಮಾನ್ಯ ಪ್ರಜೆಯ ವರೆಗೆ ಪ್ರತಿಯೊಬ್ಬರ ಮತಕ್ಕೂ ಒಂದೇ ಮೌಲ್ಯ ಇದೆ.

### ಪ್ರಭುತ್ವದ ಸೌಧವನ್ನು ಧ್ವಂಸ

ಆದರೆ ಇದೇ ಮಾದರಿಯ ಸಮಾನತೆ ಸಾಮಾಜಿಕವಾಗಿ, ಆರ್ಥಿಕವಾಗಿ ಸಾಧ್ಯವಾಗಿಲ್ಲ. ಇದನ್ನು ಸರಿಪಡಿಸದೇ ಹೋದರೆ ಅಸಮಾನತೆ ಮುಂದುವರೆಯುತ್ತದೆ, ಸಮಾನತೆ ಸಾಧ್ಯವಾಗದೆ ಹೋದರೆ ಮುಂದೊಂದು ದಿನ ಶೋಷಣೆಗೆ ಒಳಗಾದ ಜನರೇ ಪ್ರಭುತ್ವದ ಸೌಧವನ್ನು ಧ್ವಂಸ ಮಾಡುತ್ತಾರೆ ಎನ್ನುವ ಮಾತನ್ನು ಸ್ಮರಿಸಿದರು.

# ರಾಜೀನಾಮೆಗೆ ಸಂಬಂಧಿಸಿದ ಚರ್ಚೆಯೇ ನಡೆದಿಲ್ಲ, ವರದಿಗಳು ಸಂಪೂರ್ಣವಾಗಿ ಸತ್ಯಕ್ಕೆ ದೂರ': ಸಚಿವ ಬಿ ನಾಗೇಂದ್ರ

• ಉದಯವಾಹಿನಿ, ಬೆಂಗಳೂರು

ತಾವು ರಾಜೀನಾಮೆ ನೀಡಲು ಮುಂದಾಗಿದ್ದಾರೆ ಎಂಬ ಮಾಧ್ಯಮ ವರದಿಗಳನ್ನು ಸಚಿವ ಬಿ ನಾಗೇಂದ್ರ ಅವರು ಬುಧವಾರ ತಳ್ಳಿಹಾಕಿದ್ದಾರೆ.ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿರುವ ನಾಗೇಂದ್ರ ಅವರು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ ಎಂಬ ಬಗ್ಗೆ ವ್ಯಾಪಕ ಊಹಾಪೋಹಗಳು ಹಬ್ಬಿದ್ದವು. ಪಕ್ಷದ ನಾಯಕತ್ವಕ್ಕೆ ಇನ್ನು ಮುಂದೆ ಮುಜುಗರವನ್ನುಂಟುಮಾಡಲು ತಮಗೆ ಇಷ್ಟವಿಲ್ಲದ ಕಾರಣ, ಬುಧವಾರ ಸಂಜೆಯೊಳಗೆ ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡಲು ಬಯಸುವುದಾಗಿ ನಾಗೇಂದ್ರ ಅವರು ಶಿವಕುಮಾರ್ ಅವರಿಗೆ ತಿಳಿಸಿದ್ದಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಈ ವರದಿಗಳನ್ನು ತಳ್ಳಿಹಾಕಿದ ನಾಗೇಂದ್ರ, ಸದ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವರದಿಗಳು ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿವೆ. ಮುಖ್ಯಮಂತ್ರಿ ಕಚೇರಿಯಿಂದ ನನಗೆ ಯಾವುದೇ ಕರೆ ಬಂದಿಲ್ಲ ಮತ್ತು ರಾಜೀನಾಮೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆ ನಡೆದಿಲ್ಲ. ನಿಮ್ಮ ಸಹಕಾರವನ್ನು ಕೋರುತ್ತೇನೆ ಎಂದು ಹೇಳಿದ್ದಾರೆ ಎಂದು ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಅಕ್ರಮದ ಆರೋಪಕ್ಕೆ ಸಂಬಂಧಿಸಿದಂತೆ, ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡುವಂತೆ ಪ್ರತಿಪಕ್ಷ ಬಿಜೆಪಿ ಮತ್ತು ಅದರ ಮಿತ್ರಪಕ್ಷ ಜೆಡಿಎಸ್ ಆಗ್ರಹಿಸುತ್ತಿವೆ. ವಿಧಾನಸೌಧದ ಒಳಗೆ ಮತ್ತು ಹೊರಗೆ ಘೋಷಣೆಗಳನ್ನು ಕೂಗುವ ಹಾಗೂ ಪ್ರತಿಭಟನೆ ನಡೆಸುವ ಮೂಲಕ ವಿರೋಧ ಪಕ್ಷವು ಕರ್ನಾಟಕ ವಿಧಾನಮಂಡಲದ ಮುಂಗಾರು ಅಧಿವೇಶನಕ್ಕೆ ಅಡ್ಡಿಪಡಿಸಿದೆ; ಇದರ ಪರಿಣಾಮವಾಗಿ, ನಿಗದಿತ ಮುಕ್ತಾಯ ದಿನಾಂಕಕ್ಕಿಂತ ಮೂರು ದಿನ ಮುಂಚಿತವಾಗಿಯೇ, ಅಂದರೆ ಆಗಸ್ಟ್ 24ರಂದು ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

### ಸಾವಿಗೆ ಮುನ್ನ ಬರೆದಿಟ್ಟಿದ್ದ ಪತ್ರದಲ್ಲಿ ನಿಧಿಯ ಅನಧಿಕೃತ ವರ್ಗಾವಣೆ


ಉದಯವಾಹಿನಿ ಚಿತ್ರ

ವಾಲ್ಮೀಕಿ ನಿಗಮದ ಲೆಕ್ಕಪತ್ರ ಅಧಿಕಾರಿ ಚಂದ್ರಶೇಖರನ್ ಪಿ. ಅವರು ಮೇ 2024ರಲ್ಲಿ ಆತ್ಮಹತ್ಯೆ ಮಾಡಿಕೊಂಡ ನಂತರ ಈ ಪ್ರಕರಣ ಬೆಳಕಿಗೆ ಬಂತು. ಅವರು ಸಾವಿಗೆ ಮುನ್ನ ಬರೆದಿಟ್ಟಿದ್ದ ಪತ್ರದಲ್ಲಿ ನಿಧಿಯ ಅನಧಿಕೃತ ವರ್ಗಾವಣೆ ಬಗ್ಗೆ ಆರೋಪಿಸಿದ್ದರು.

## ಟಾಕ್ಸಿಕ್' ಸಿನಿಮಾ ವಿರುದ್ಧ ಸುಳ್ಳು ಮಾಹಿತಿ ಪ್ರಕಟಿಸದಂತೆ ಕೋರ್ಟ್ ತಡೆಯಾಜ್ಞೆ!

• ಉದಯವಾಹಿನಿ, ಬೆಂಗಳೂರು

ಬುಧವಾರ ವಿಶ್ವದಾದ್ಯಂತ ಬಿಡುಗಡೆಯಾದ ನಟ ಯಶ್ ಅಭಿನಯದ 'ಟಾಕ್ಸಿಕ್' ಸಿನಿಮಾ ವಿರುದ್ಧ ಯಾವುದೇ ಸುಳ್ಳು ಅಥವಾ ಮಾನಹಾನಿಕರ ಮಾಹಿತಿ ಪ್ರಕಟ ಅಥವಾ ಹರಡುವಿಕೆ ತಡೆಗೆ ಬೆಂಗಳೂರಿನ ನ್ಯಾಯಾಲಯವೊಂದು ತಾತ್ಕಾಲಿಕ ತಡೆಯಾಜ್ಞೆಯನ್ನು ಹೊರಡಿಸಿದೆ. ನಿರ್ಮಾಣ ಸಂಸ್ಥೆಯಾದ 'ಕೆವಿಎನ್ ಪ್ರೊಡಕ್ಷನ್ಸ್ ಎಲ್‌ಎಲ್‌ಪಿ'ಯು 'ಎಕ್ಸ್ ಕಾರ್ಪ್' ಸೇರಿದಂತೆ ವಿವಿಧ ಪ್ರತಿವಾದಿಗಳ ವಿರುದ್ಧ ಹೂಡಿದ ದಾವೆಯ ಮೇರೆಗೆ, ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಆಗಸ್ಟ್ 22 ರಂದು ಈ ಮಧ್ಯಂತರ ಆದೇಶವನ್ನು ಹೊರಡಿಸಿದೆ. ಈ ದಾವೆಯಲ್ಲಿ ಅಪರಿಚಿತ ವ್ಯಕ್ತಿಗಳನ್ನು ಪ್ರತಿನಿಧಿಸುವ 'ಜಾನ್ ಡೋ' ಎಂಬ ಪ್ರತಿವಾದಿಯೂ ಸೇರಿದ್ದಾರೆ. ವಾದಿ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯ ಪರವಾಗಿ ಮೇಲ್ನೋಟಕ್ಕೆ ಪ್ರಕರಣವೊಂದು ಇರುವುದು ಇರುವುದು ಕಂಡುಬಂದಿದೆ. ಒಂದು ವೇಳೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡದಿದ್ದರೆ, ಈ ದಾವೆಯನ್ನು ಹೂಡಿದ ಮೂಲ ಉದ್ದೇಶವೇ ವಿಫಲವಾಗುತ್ತದೆ ಮತ್ತು ಇದು ಅನೇಕ ಕಾನೂನು ಪ್ರಕ್ರಿಯೆಗಳಿಗೆ ಎಡೆಮಾಡಿಕೊಡುವಂತಾಗುತ್ತದೆ.

# ಆಹಾರ ಸುರಕ್ಷತೆ ಲೋಪದೋಷಗಳನ್ನು ಸರಿಪಡಿಸಲು 15 ದಿನಗಳ ಡೆಡ್‌ಲೈನ್

### ಕೊಳೆತ ಅಥವಾ ಕಲುಷಿತಗೊಂಡ ಆಹಾರ ಉತ್ಪನ್ನಗಳನ್ನು ತಕ್ಷಣವೇ ಪ್ರತ್ಯೇಕಿಸಿ ವಿಲೇವಾರಿ ಮಾಡಬೇಕು

• ಉದಯವಾಹಿನಿ, ಬೆಂಗಳೂರು

1 ಚಿನ್ನಸ್ವಾಮಿ ಕ್ರೀಡಾಂಗಣದ ಕ್ಲಬ್
2 5 ಪಂಚತಾರಾ ಹೋಟೆಲ್‌ಗಳು
3 ಹಾವಳಿಯನ್ನು ತಡೆಯುವುದು

ರಾಜ್ಯದಲ್ಲಿ ಇತ್ತೀಚೆಗೆ ನಡೆಸಲಾದ ವಿಶೇಷ ತಪಾಸಣಾ ಅಭಿಯಾನದಲ್ಲಿ ಕಂಡುಬಂದ ಆಹಾರ ಸುರಕ್ಷತೆ, ನೈರ್ಮಲ್ಯ ಮತ್ತು ಸ್ವಚ್ಛತೆಗೆ ಸಂಬಂಧಿಸಿದ ಲೋಪದೋಷಗಳನ್ನು ಸರಿಪಡಿಸಲು ಕರ್ನಾಟಕ ಆಹಾರ ಸುರಕ್ಷತೆ ಮತ್ತು ಔಷಧ ನಿಯಂತ್ರಣ ಇಲಾಖೆಯು ಆಹಾರ ಉದ್ಯಮ ನಿರ್ವಾಹಕರಿಗೆ 15 ದಿನಗಳ ಕಾಲಾವಕಾಶ ನೀಡಿದೆ. ಇಲಾಖೆಯು ಹೊರಡಿಸಿರುವ ಸಲಹಾ ಸೂಚನೆಯಲ್ಲಿ, ಆಹಾರ ಉದ್ಯಮ ನಿರ್ವಾಹಕರು ಕಡ್ಡಾಯವಾಗಿ ಮಾನ್ಯತೆಯುಳ್ಳ ಪರವಾನಗಿ ಅಥವಾ ನೋಂದಣಿಯನ್ನು ಹೊಂದಿರಬೇಕು ಮತ್ತು ಎಲ್ಲಾ ಆಹಾರ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು ಎಂದು ನಿರ್ದೇಶಿಸಿದೆ. ಅಡುಗೆ ಮನೆ ಮತ್ತು ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಆಹಾರ ಪದಾರ್ಥಗಳಿಗೆ ಸ್ಪರ್ಶಿಸುವ ಮೇಲ್ಮೈಗಳು ಹಾಗೂ ಉಪಕರಣಗಳನ್ನು ಸರಿಯಾಗಿ ತೊಳೆಯುವುದು ಮತ್ತು ಸ್ಯಾನಿಟೈಸ್ ಮಾಡುವುದು, ಕೀಟಗಳ ಹಾವಳಿಯನ್ನು ತಡೆಯುವುದು ಹಾಗೂ ಹಾಲು, ಮಾಂಸ, ಮೊಟ್ಟೆ ಮತ್ತು ಸಿದ್ಧಪಡಿಸಿದ ಆಹಾರಗಳಂತಹ ಬೇಗನೆ ಹಾಳಾಗುವ ಪದಾರ್ಥಗಳನ್ನು ನಿಗದಿತ ತಾಪಮಾನದಲ್ಲಿಡುವುದು ಕಡ್ಡಾಯವಾಗಿದೆ. ಶೀತಲ ಯಂತ್ರಗಳು ಮತ್ತು ಫ್ರೀಜರ್‌ಗಳು ಉತ್ತಮ ಸ್ಥಿತಿಯಲ್ಲಿರಬೇಕು ಎಂದು ಇಲಾಖೆ ತಿಳಿಸಿದೆ. ಆಹಾರ ತಯಾರಕರು ಮತ್ತು


ಉದಯವಾಹಿನಿ ಚಿತ್ರ

ಪೂರೈಕೆದಾರರು ವೈಯಕ್ತಿಕ ನೈರ್ಮಲ್ಯವನ್ನು ಕಾಯ್ದುಕೊಳ್ಳಬೇಕು, ಸ್ವಚ್ಛವಾದ ರಕ್ಷಣಾತ್ಮಕ ಉಡುಪುಗಳನ್ನು ಧರಿಸಬೇಕು ಹಾಗೂ ಆಹಾರವನ್ನು ನಿರ್ವಹಿಸುವಾಗ ಆಗಾಗ್ಗೆ ಸರಿಯಾಗಿ ಕೈಗಳನ್ನು ತೊಳೆಯಬೇಕು. ಆಹಾರ ನಿರ್ವಹಣೆ ಮಾಡುವ ಸಿಬ್ಬಂದಿಗೆ ಅಗತ್ಯವಿರುವ ಆಹಾರ ಸುರಕ್ಷತಾ ತರಬೇತಿ ಮತ್ತು ಆರೋಗ್ಯ ತಪಾಸಣೆಯನ್ನು ನಿಯಮಾನುಸಾರ ಮಾಡಿಸುವುದು ಕಡ್ಡಾಯವಾಗಿದೆ. ನಗರದ 10 ಪ್ರಮುಖ ಉನ್ನತ ಮಟ್ಟದ ಕ್ಲಬ್‌ಗಳಲ್ಲಿ ನೈರ್ಮಲ್ಯದ ಕೊರತೆ, ಅವಧಿ ಮೀರಿದ ಮಾಂಸ ಹಾಗೂ ಯಾವುದೇ ಲೇಬಲ್ ಅಥವಾ ದಿನಾಂಕವಿಲ್ಲದ ಆಹಾರ ಪದಾರ್ಥಗಳನ್ನು ಬಳಸುವುದು ಸೇರಿದಂತೆ ಗಂಭೀರ ನಿಯಮ ಉಲ್ಲಂಘನೆಗಳು ಪತ್ತೆಯಾಗಿವೆ. ಈ ವೇಳೆ ಹಲವು ಕ್ಲಬ್‌ಗಳಲ್ಲಿ ಅವಧಿ ಮೀರಿದ ಮಾಂಸ ಮತ್ತು ಇತರ ಆಹಾರ ಪದಾರ್ಥಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಪಾಸಣೆಯ ನಂತರ, ಕನಿಷ್ಠ ಎರಡು ಸಂಸ್ಥೆಗಳಿಗೆ ಆಹಾರ ಸುರಕ್ಷತಾ ಲೋಪಗಳಿಗಾಗಿ ನೋಟಿಸ್ ಜಾರಿ ಮಾಡಲಾಗಿದೆ. ಇತ್ತೀಚೆಗೆ ಕನಿಷ್ಠ 5 ಪಂಚತಾರಾ ಹೋಟೆಲ್‌ಗಳು, ಕ್ಲಬ್‌ಗಳು ಮತ್ತು ರೆಸ್ಟೋರೆಂಟ್‌ಗಳ ಮೇಲೆ ನಡೆದ ದಾಳಿಗಳಲ್ಲಿ ಕೊಳೆತ ಮಾಂಸ, ಅವಧಿ ಮೀರಿದ ಉತ್ಪನ್ನಗಳು, ನೈರ್ಮಲ್ಯವಿಲ್ಲದ ಹಾಗೂ ಕರಾವೆಗಳು ತುಂಬಿದ್ದ ಅಡುಗೆ ಮನೆಗಳು ಪತ್ತೆಯಾಗಿದ್ದವು. ಹಲವು ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದ್ದರೆ, ಕೆಲವನ್ನು ಮುಚ್ಚಲು ಆದೇಶಿಸಲಾಗಿತ್ತು.

> 15 ದಿನಗಳ ನಂತರ ಸಂಬಂಧಪಟ್ಟ ಆಹಾರ ಸುರಕ್ಷತಾ ಅಧಿಕಾರಿಗಳು ಮರು ತಪಾಸಣೆ ನಡೆಸಲಿದ್ದು, ಲೋಪಗಳು ಸರಿಹೋಗದಿದ್ದರೆ ಅಥವಾ ನಿಯಮ ಉಲ್ಲಂಘನೆ ಮುಂದುವರಿದಿದ್ದರೆ, 'ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ 2006' ಮತ್ತು ಅದರ ನಿಯಮಾವಳಿಗಳ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ. - ಔಷಧ ನಿಯಂತ್ರಣ ಇಲಾಖೆ

**ಅಪಾಯಕಾರಿ ಆಹಾರ ಉತ್ಪನ್ನಗಳ ಜಪ್ತಿ** ಇತ್ತೀಚಿನ ಮೂರು ದಿನಗಳ ವಿಶೇಷ ಅಭಿಯಾನದಲ್ಲಿ ಅಧಿಕಾರಿಗಳು ಬೆಂಗಳೂರಿನ 60 ಹೋಟೆಲ್‌ಗಳನ್ನು ತಪಾಸಣೆ ನಡೆಸಿ 77 ಆಹಾರದ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಈ ವೇಳೆ 640 ಕೆಜಿ ಮಾಂಸ ಮತ್ತು 276 ಕೆಜಿ ಕೊಳೆತ ತರಕಾರಿಗಳು ಹಾಗೂ ಅಪಾಯಕಾರಿ ಆಹಾರ ಉತ್ಪನ್ನಗಳನ್ನು ಜಪ್ತಿ ಮಾಡಲಾಗಿದೆ.

## ಕೆಆರ್‌ಎಸ್ ಒಳಹರಿವು 9,438 ಕ್ಯೂಸೆಕ್‌ಗೆ ಏರಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆ ಜಲಾಶಯಕ್ಕೆ ಹರಿದುಬರುತ್ತಿರುವ ನೀರಿನ ಒಳಹರಿವಿನಲ್ಲಿ ಭಾರೀ ಏರಿಕೆ ಕಂಡಿದೆ. ಕಳೆದ 2 ದಿನಗಳಿಂದ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ. ಹೀಗಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ಒಳ ಹರಿವಿನ ಪ್ರಮಾಣ 9,438 ಕ್ಯೂಸೆಕ್‌ಗೆ ಏರಿಕೆ ಆಗಿದೆ. ಸದ್ಯ 124.80 ಅಡಿ ಸಾಮರ್ಥ್ಯದ ಕೆಆರ್‌ಎಸ್ ಡ್ಯಾಂನಲ್ಲಿ 108.63 ಅಡಿ ನೀರು ಭರ್ತಿಯಾಗಿದ್ದು, 30.367 ಟಿಎಂಸಿ ನೀರಿದೆ. ಡ್ಯಾಂ ನಿಂದ 4,478 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಇದೇ ರೀತಿ ಒಳಹರಿವು ಹೆಚ್ಚಾದ್ರೆ ಶೀಘ್ರದಲ್ಲೇ ಡ್ಯಾಂ ಭರ್ತಿಯಾಗುವ ಸಾಧ್ಯತೆಯಿದೆ, ಇದರೊಂದಿಗೆ ತಮಿಳುನಾಡಿಗೆ ನೀರಿನ ಸಮಸ್ಯೆಯೂ ಬಗೆಹರಿಯುವ ಸಾಧ್ಯತೆ ಇದೆ.

## ಪಡಿತರ ರಾಗಿಯಲ್ಲಿ ಮಣ್ಣು; ಕಳಪೆ ರಾಗಿ ವಿತರಣೆಗೆ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಪುತ್ತನಪುರ ಗ್ರಾಮದ ನ್ಯಾಯಬೆಲೆ ಅಂಗಡಿಯಲ್ಲಿ ಸಾರ್ವಜನಿಕರಿಗೆ ವಿತರಿಸಲಾಗುತ್ತಿರುವ ಪಡಿತರ ರಾಗಿಯಲ್ಲಿ ಮಣ್ಣು ಮಿಶ್ರಣವಾಗಿದ್ದು, ಕಳಪೆ ಗುಣಮಟ್ಟದ ರಾಗಿ ವಿತರಿಸಲಾಗಿದೆ ಎಂದು ರೈತ ಮುಖಂಡ ಪ್ರವೀಣ್ ಆರೋಪಿಸಿದ್ದಾರೆ.

ನ್ಯಾಯಬೆಲೆ ಅಂಗಡಿಯಲ್ಲಿ ವಿತರಿಸಿದ ರಾಗಿಯಲ್ಲಿ ಹೆಚ್ಚಿನ ಪ್ರಮಾಣದ ಮಣ್ಣು ಕಂಡುಬಂದಿದ್ದು, ಇದು ಸೇವನೆಗೆ ಯೋಗ್ಯವಾಗಿಲ್ಲ ಎಂದು ಅವರು ದೂರಿದ್ದಾರೆ. ಪಡಿತರ ವ್ಯವಸ್ಥೆಯಲ್ಲೇ ಅನ್ಯಾಯ ನಡೆಯುತ್ತಿದ್ದು, ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಸಮರ್ಪಕ ಸ್ಪಂದನೆ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

ಅನ್ನಭಾಗ್ಯ ಯೋಜನೆಯಡಿ ವಿತರಿಸುವ ಪಡಿತರವೇ ಕಳಪೆ ಗುಣಮಟ್ಟದ್ದಾಗಿದ್ದರೆ ಫಲಾನುಭವಿಗಳು ಅದನ್ನು ಹೇಗೆ ಬಳಸಬೇಕು ಎಂದು ಪ್ರಶ್ನಿಸಿರುವ ಅವರು, 10 ಕೆ.ಜಿ. ರಾಗಿಯನ್ನು ಸ್ವಚ್ಛಗೊಳಿಸಿದ ಬಳಿಕ ಕೇವಲ 2ರಿಂದ 3 ಕೆ.ಜಿ.ಯಷ್ಟು ರಾಗಿ ಮಾತ್ರ ಉಳಿಯುತ್ತದೆ. ಉಳಿದದ್ದು ಮಣ್ಣೇ ಆಗಿದೆ ಎಂದು ಆರೋಪಿಸಿದ್ದಾರೆ.ಕಳಪೆ ಗುಣಮಟ್ಟದ ಪಡಿತರ ವಿತರಿಸುವ ಬದಲು ವಿತರಿಸದೇ ಇರುವುದೇ ಒಳಿತು. ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ರಾಗಿಯ ಗುಣಮಟ್ಟ ಪರಿಶೀಲಿಸಿ, ಕಳಪೆ ರಾಗಿ ವಿತರಣೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅರ್ಹ ಫಲಾನುಭವಿಗಳಿಗೆ ಗುಣಮಟ್ಟದ ಪಡಿತರ ಒದಗಿಸಬೇಕು ಎಂದು ಪ್ರವೀಣ್ ಒತ್ತಾಯಿಸಿದ್ದಾರೆ.

### ಅಧಿಕಾರಿಗಳ ಸ್ಪಷ್ಟನೆ

ರಾಗಿಯಲ್ಲಿ ಮಣ್ಣು ಮಿಶ್ರಣವಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ನೇರವಾಗಿ ರೈತರಿಂದ ಖರೀದಿಸಿರುವ ಕೆಲವು ಚೀಲಗಳಲ್ಲಿ ಈ ರೀತಿಯ ರಾಗಿ ಕಂಡುಬಂದಿದೆ. ಕಳಪೆ ಗುಣಮಟ್ಟದ ಆಹಾರ ಪದಾರ್ಥ ವಿತರಿಸಲು ಅವಕಾಶವಿಲ್ಲ. ಫಲಾನುಭವಿಗಳಿಂದ ದೂರು ಬಂದ ಹಿನ್ನೆಲೆಯಲ್ಲಿ, ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಯವರಿಗೆ ಬೇರೆ ಗುಣಮಟ್ಟದ ರಾಗಿ ವಿತರಿಸುವಂತೆ ಸೂಚಿಸಲಾಗಿದೆ ಎಂದು ಆಹಾರ ಶಿರೇಸ್ತಾದಾರ್ ಅರವಿಂದ್ ತಿಳಿಸಿದ್ದಾರೆ.

# ವಿಶ್ವ ವಿಖ್ಯಾತ ಮೈಸೂರು ದಸರಾ ಪ್ರಮುಖ ಆಕರ್ಷಣೆ ಜಂಬೂಸವಾರಿ

## ಸುಮಾರು 6 ವರ್ಷಗಳ ಕಾಲ ಅಂಬಾರಿಯನ್ನು ಹೊತ್ತು ನಿವೃತ್ತಿ ಹೊಂದಿದ ಅಭಿಮನ್ಯು ಆನೆಗೆ ಇಂದು ಬೀಳ್ಕೊಡುಗೆ ನೀಡಲಾಗುತ್ತಿದೆ

• ಉದಯವಾಹಿನಿ, ಮೈಸೂರು

ವಿಶ್ವ ವಿಖ್ಯಾತ ಮೈಸೂರು ದಸರಾದ ಪ್ರಮುಖ ಆಕರ್ಷಣೆ ಜಂಬೂಸವಾರಿ ಆಗಿದ್ದು, ಜಂಬೂ ಸವಾರಿಯಲ್ಲಿ ಭಾಗವಹಿಸುವ ಆನೆಗಳ ಪಯಣಕ್ಕೆ ಚಾಲನೆ ನೀಡಲಾಗಿದೆ ಎಂದು ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಬುಧವಾರ ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ ಗ್ರಾಮದಲ್ಲಿ ದಸರಾ ಗಜಪಯಣ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮೈಸೂರು ದಸರಾಕ್ಕೆ 400ಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ. ನಾಡಹಬ್ಬ ದಸರಾ ನಮ್ಮ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಬಿಂಬಿಸುವ ಹಬ್ಬ. ದಸರಾ ವಿಶ್ವವಿಖ್ಯಾತವಾಗಿದೆ. ಈ ನಾಡಹಬ್ಬದ ಪ್ರಮುಖ ಆಕರ್ಷಣೆ ಜಂಬೂಸವಾರಿ. ನಮ್ಮ ಗಜ ಪಡೆಯು ಜಂಬೂಸವಾರಿಯಲ್ಲಿ ಆನೆ ಅಂಬಾರಿಯನ್ನು ಹೊತ್ತು ಸಾಗುತ್ತದೆ. ಇಂದು ಆನೆಗಳನ್ನು ಮೈಸೂರಿಗೆ ಕರೆದುಕೊಂಡು ಹೋಗಿ 2 ತಿಂಗಳು ತರಬೇತಿ ನೀಡಲಾಗುತ್ತದೆ. ಅಲ್ಲಿ ಉತ್ತಮ ಪೌಷ್ಟಿಕ ಆಹಾರವನ್ನು ನೀಡಲಾಗುತ್ತದೆ. ಅಲ್ಲದೆ ವರ್ಷ ಪೂರ್ತಿ ಪೌಷ್ಟಿಕ ಆಹಾರ ನೀಡಿ ಆನೆಗಳ ಆರೋಗ್ಯ ತಪಾಸಣೆಯನ್ನು ಕಾಲ ಕಾಲಕ್ಕೆ ಮಾಡಲಾಗುತ್ತದೆ ಎಂದರು.

ಸುಮಾರು 6 ವರ್ಷಗಳ ಕಾಲ ಅಂಬಾರಿಯನ್ನು ಹೊತ್ತು ನಿವೃತ್ತಿ ಹೊಂದಿದ ಅಭಿಮನ್ಯು ಆನೆಗೆ ಇಂದು ಬೀಳ್ಕೊಡುಗೆ ನೀಡಲಾಗುತ್ತಿದೆ. ಅಭಿಮನ್ಯು ಆರೋಗ್ಯಯುತವಾಗಿ ನೂರಾರು ವರ್ಷ ಬದುಕಲಿ ಎಂದು ಹಾರೈಸುತ್ತೇನೆ. ಅರಣ್ಯದಂಚಿನ ರೈತರು ಸಾಗುವಳಿ ಮಾಡುತ್ತಿರುವ ಪ್ರದೇಶ ಹಾಗೂ ಮನೆ ಕಟ್ಟಿಕೊಂಡಿರುವ ಪ್ರದೇಶ ಅರಣ್ಯ ಇಲಾಖೆಗೆ ಸೇರಿದ್ದು ಎಂದು ತೊಂದರೆ ಆಗುತ್ತಿರುವ ಕುರಿತು ಹುಣಸೂರು ಶಾಸಕರಾದ ಜಿ ಡಿ ಹರೀಶ್ ಗೌಡ ಅವರು


ಉದಯವಾಹಿನಿ ಚಿತ್ರ


1 400ಕ್ಕೂ ಹೆಚ್ಚಿನ ವರ್ಷಗಳ ಇತಿಹಾಸ
2 2 ತಿಂಗಳು ತರಬೇತಿ ನೀಡಲಾಗುತ್ತದೆ
3 ರೈತರು ಅರವರ್ಷ ಪೂರ್ತಿ ಪೌಷ್ಟಿಕ ಆಹಾರ

ಗಮನ ಸೆಳೆದಿದ್ದಾರೆ. ಈ ಬಗ್ಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ಜಂಟಿ ಸರ್ವೇ ಮಾಡಿ ಪರಿಹಾರ ಕಂಡುಕೊಳ್ಳಲಾಗುವುದು. ಲಕ್ಷ್ಮಣ ತೀರ್ಥ ನದಿಗೆ ಚರಂಡಿ ನೀರು ಸೇರದಂತೆ ತಡೆಯಲು ಒಳಚರಂಡಿ ವ್ಯವಸ್ಥೆ ಮಾಡಲು ಅನುದಾನ ನೀಡಿ ಕ್ರಮ ವಹಿಸಲಾಗುವುದು ಎಂದು ಸಚಿವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ ಡಿ ಹರೀಶ್ ಗೌಡ ಮಾತನಾಡಿ, 400 ವರ್ಷಗಳ ಇತಿಹಾಸ ಇರುವ ಮೈಸೂರು ದಸರಾ ಒಂದು ವಿಶಿಷ್ಟ ಕಾರ್ಯಕ್ರಮ, ಅಂದಿನ ಮಹಾರಾಜರ ಕಾಲದಿಂದ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿಯೂ ದಸರಾವನ್ನು ವಿಜೃಂಭಣೆಯಿಂದ ಆಚರಣೆ ಮಾಡಲಾಗುತ್ತಿದೆ. ದಸರಾವು ನಮ್ಮ ಹುಣಸೂರು ತಾಲ್ಲೂಕಿನಿಂದ ಗಜಪಯಣದ ಮೂಲಕ ಆರಂಭವಾಗುತ್ತದೆ. ಇದು ಹುಣಸೂರಿನ ಜನತೆಗೆ ಹೆಮ್ಮೆಯ ವಿಷಯ. ಕಳೆದ ಹಲವು ವರ್ಷಗಳಿಂದ ಅಂಬಾರಿ ಹೊತ್ತಿದ್ದ ಅಭಿಮನ್ಯುಗೆ ಬೀಳ್ಕೊಡುಗೆ ನೀಡಲಾಗುತ್ತಿದೆ. ಆನೆಗಳಲ್ಲಿ ಭೀಮ, ಮಹೇಂದ್ರ, ಅಭಿಮನ್ಯು ಎಂದರೆ ಕ್ರೇಜ್. ಆನೆಗಳು ತಮ್ಮದೇ ಆದ ಅಭಿಮಾನಿ ಬಳಗವನ್ನು ಹೊಂದಿವೆ ಎಂದರು.

ರೈತರಿಗೆ ತೊಂದರೆ ಆಗದಂತೆ ಸರ್ಕಾರ ಕ್ರಮ ವಹಿಸಬೇಕು. ಕಾಡುಪ್ರಾಣಿಗಳಿಂದ ಬೆಳೆ ನಷ್ಟ ಆದರೆ ಪರಿಹಾರವನ್ನು ನೀಡಬೇಕು ಎಂದು ಮನವಿ ಮಾಡಿದರು. ಲಕ್ಷ್ಮಣ ತೀರ್ಥ ನದಿ ಕಲುಷಿತವಾಗುತ್ತಿದ್ದು, ಒಳ ಚರಂಡಿ ನೀರನ್ನು ಲಕ್ಷ್ಮಣ ತೀರ್ಥ ನದಿಗೆ ಬಿಡದಂತೆ ಕ್ರಮವಹಿಸಬೇಕು -ಶಾಸಕ ಜಿ ಡಿ ಹರೀಶ್ ಗೌಡ

ಮಾನವ ಮತ್ತು ಪ್ರಾಣಿ ಸಂಘರ್ಷ ತಡೆಯಲು ಬ್ಯಾರಿಕೇಡ್ ವ್ಯವಸ್ಥೆ ಹಾಗೂ ಬೇಲಿ ವ್ಯವಸ್ಥೆ ಮಾಡಲಾಗಿದೆ. ಪ್ರಾಣಿಗಳ ಜೊತೆ ಸೌಹಾರ್ದತೆಯಿಂದ ವರ್ತಿಸಬೇಕು. ಪ್ರಾಣಿಗಳಿಗೆ ತೊಂದರೆ ನೀಡದೇ ಕಾಡಿನಲ್ಲಿ ಸ್ವತಂತ್ರವಾಗಿ ಇರಲು ಬಿಡಬೇಕು. ಈ ಬಾರಿ ದಸರಾದಲ್ಲಿ ಏರ್‌ಶೋ ಮಾಡಲು ಕ್ರಮ ವಹಿಸಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.-ಡಾ ಯತೀಂದ್ರ


ಮಾವುತ ವಸಂತ ಹಾಗೂ ಕಾವಾಡಿ ರಾಘು ಜಿ ಕೆ ಅವರಿಗೆ ನೀಡಿ ಸನ್ಮಾನ

ದಸರಾ ಗಜಪಯಣದ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಆನೆಗಳ ಮಾವುತರಿಗೆ ಹಾಗೂ ಕಾವಾಡಿಗಳಿಗೆ ಸನ್ಮಾನ ಮಾಡಲಾಯಿತು. ಅರ್ಜುನ ಪ್ರಶಸ್ತಿಯನ್ನು ಅಭಿಮನ್ಯು ಮಾವುತ ವಸಂತ ಹಾಗೂ ಕಾವಾಡಿ ರಾಘು ಜಿ ಕೆ ಅವರಿಗೆ ನೀಡಿ ಸನ್ಮಾನಿಸಲಾಯಿತು.

## ಈದ್ ಮಿಲಾದ್ ಹಿನ್ನೆಲೆ ಪೊಲೀಸ್ ಪಥ ಸಂಚಲನ

• ಉದಯವಾಹಿನಿ, ಮುಳಬಾಗಿಲು

ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ನಗರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಿಕ್ರಿವಾಲ್ ನೇತೃತ್ವದಲ್ಲಿ ಪೊಲೀಸ್ ಪಥ ಸಂಚಲನ ನಡೆಯಿತು.ಪಥಸಂಚಲನದಲ್ಲಿ ಎ.ಎಸ್.ಪಿ ಮನೀಷಾ ಮನೋಹಿ, ಸರ್ಕಲ್ ಇನ್‌ಸ್ಪೆಕ್ಟರ್‌ಗಳು, ಸಬ್ ಇನ್‌ಸ್ಪೆಕ್ಟರ್‌ಗಳು ಹಾಗೂ ನೂರಾರು ಮಂದಿ ಹೆಜ್ಜೆ ಹಾಕಿದರು.

ನಗರದ ಶಾಮೀರ್ ಮೊಹಲ್ಲಾ, ಶ್ರೀನಿವಾಸಪುರ ವೃತ್ತ, ವಿಠಲೇಶ್ವರ ನಗರ, ಪಳ್ಳಿಗರ ಪಾಳ್ಯ, ಸೋಮೇಶ್ವರ ಪಾಳ್ಯ, ಹೊಸಪಾಳ್ಯ, ಅಂಬೇಡ್ಕರ್ ವೃತ್ತ, ಡಿವಿಜಿ ವೃತ್ತ, ಕೆಇಬಿ ವೃತ್ತ ಮತ್ತಿತರರ ಬೀದಿಗಳಲ್ಲಿ ಪಥ ಸಂಚಲನ ನಡೆಯಿತು.


ಉದಯವಾಹಿನಿ ಚಿತ್ರ

ಎಲ್ಲರೂ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು. ಯಾವುದೇ ಕಾರಣಕ್ಕೂ ಶಾಂತಿಗೆ ಭಂಗವಾಗಬಾರದು. ನಿಗದಿತ ಸ್ಥಳಗಳ ಮೂಲಕ ಮಾತ್ರ ಮೆರವಣಿಗೆ ಸಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಬೇಕು ಎಂದು ಸೂಚಿಸಿದರು. ಪಥ ಸಂಚಲನ ಬೀದಿಗಳಿಗೆ ಆಗಮಿಸುತ್ತಿದ್ದಂತೆ ಕೆಲವು ಕಡೆಗಳಲ್ಲಿ ಪೊಲೀಸ್ ಸಿಬ್ಬಂದಿ ಮೇಲೆ ಹೂ ಮಳೆ ಸುರಿದು, ಅಧಿಕಾರಿಗಳನ್ನು ಅಭಿನಂದಿಸಲಾಯಿತು.

# ತಮಿಳುನಾಡಿಗೆ ಮತ್ತೆ ಕಾವೇರಿ ನೀರು: ವಾಟಾಳ್ ನೇತೃತ್ವದಲ್ಲಿ ಮುತ್ತಿಗೆ: ಸೆಪ್ಟೆಂಬರ್ 1ರಂದು ತಮಿಳುನಾಡು ಗಡಿ ಬಂದ್‌ಗೆ ಕರೆ

• ಉದಯವಾಹಿನಿ, ಮಂಡ್ಯ

ಕಾವೇರಿ ಕೊಳ್ಳದ ರೈತರಿಗೆ ಮತ್ತೆ ಶಾಕ್ ಎದುರಾಗಿದೆ. ತಮಿಳುನಾಡಿಗೆ ಮತ್ತೆ 15 ದಿನಗಳ ಕಾಲ 9 ಸಾವಿರ ಕ್ಯೂಸೆಕ್ ನೀರು ಬಿಡುಗಡೆಗೆ ಅಥಾರಿಟಿ ಆದೇಶ ಮಾಡಿದೆ. ಇದರ ಬೆನ್ನಲ್ಲೆ ಮಂಡ್ಯದಲ್ಲಿ ಮತ್ತೆ ಕಾವೇರಿಯ ಕಿಚ್ಚು ಜೋರಾಗಿದೆ.

ತಮಿಳುನಾಡಿಗೆ ಮತ್ತೆ ಕಾವೇರಿ ನೀರು ಬಿಡುವಂತೆ ಆದೇಶ ಖಂಡಿಸಿ ಮಂಡ್ಯದಲ್ಲಿ ಪ್ರತಿಭಟನೆಗಳು ಜೋರಾಗಿದೆ. ಮಂಗಳವಾರ ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಮಂಡ್ಯ ರಕ್ಷಣಾ ವೇದಿಕೆಯಿಂದ ಕಾವೇರಿ ನದಿ ಬಳಿ ಹೊಟ್ಟೆಗೆ ತಣ್ಣೀರು ಬಟ್ಟೆ ಎಂಬ ವಿಭಿನ್ನ ಚಳವಳಿ ಮಾಡುವ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಮಿಳುನಾಡಿಗೆ ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎಂದು ಆಗ್ರಹಿಸಿದರು. ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕೆಆರ್‌ಎಸ್‌ಗೆ


ಉದಯವಾಹಿನಿ ಚಿತ್ರ

ಮುತ್ತಿಗೆ ಹಾಕಲಾಯಿತು. ಈ ವೇಳೆ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದು, ವಾಹನದ ಮೂಲಕ ಕರೆದೊಯ್ದರು. ಮಾಧ್ಯಮದ ಜೊತೆ ಮಾತನಾಡಿದ ವಾಟಾಳ್ ನಾಗರಾಜ್, ಆಗಸ್ಟ್ 27ರಂದು ಮೆಜೆಸ್ಟಿಕ್‌ನಲ್ಲಿ ರಾಜ್ಯದ ಸಂಸದರ ಬಹಿರಂಗ ಹರಾಜು ಹಾಕಲಾಗುತ್ತದೆ. ಸೆಪ್ಟೆಂಬರ್ 1ರಂದು ತಮಿಳುನಾಡು ಗಡಿ ಬಂದ್ ಮಾಡಲಾಗುತ್ತದೆ ಎಂದು ತಿಳಿಸಿದರು.

ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹರಾಜು ಹಾಕಲಾಗುತ್ತದೆ. ಗರಿಷ್ಠ 3 ಸಾವಿರಕ್ಕೆ ಬಂದ ಯಾರು ಬೇಕಾದರೂ ಖರೀದಿಸಬಹುದು.

ಬೇಡ ಎಂದವರನ್ನು ಅಲ್ಲೇ ಕಸದ ಬುಟ್ಟಿಗೆ ಬಿಸಾಕುತ್ತೇವೆ. ನಮ್ಮ ರಾಜ್ಯದ ವಿಚಾರದಲ್ಲಿ ರಾಜಕೀಯ ಮಾಡಬೇಡಿ. ನಿಮಗೆ ಅವಶ್ಯಕತೆ ಇದ್ದರೆ ನಿಮ್ಮವರನ್ನು ಕರೆದೊಯ್ಯಿರಿ. ನಾವು ಹೋಗಿ ಅನ್ನೋದಿಲ್ಲ, ನೀವೇ ತಮಿಳುನಾಡಿನವರನ್ನು ಕರೆದೊಯ್ಯಿರಿ. ರೈಲು, ಬಸ್ ಯಾವುದರಲ್ಲಾದರೂ ಕರೆದುಕೊಂಡು ಹೋಗಿ.

ರಾಜ್ಯ ಸರ್ಕಾರಕ್ಕೂ ಎಚ್ಚರಿಕೆ, ಯಾವುದೇ ಕಾರಣಕ್ಕೂ ನೀರು ಬಿಡಬೇಡಿ. ನೀರು ಬಿಟ್ಟರೆ ಮತ್ತೊಂದು ಬಂದ್ ಮಾಡಬೇಕಾಗುತ್ತೆ. ಕರ್ನಾಟಕ, ಕನ್ನಡಿಗರಿಗಾಗಿ ಹತ್ತು ಬಂದ್ ಬೇಕಿದ್ದರೂ ಮಾಡುತ್ತೇವೆ ಎಂದು ಎಚ್ಚರಿಕೆ ಕೊಟ್ಟರು.

## ಇಬ್ಬರ ಮೇಲೆ ಬಹಳ ಹತ್ತಿರದಿಂದ ಗುಂಡು ಹಾರಿಸಿರುವುದು ದೃಢ, ಮರಣೋತ್ತರ ಪರೀಕ್ಷೆಯಲ್ಲಿ ಸತ್ಯ ಬಹಿರಂಗ...!

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ಧಾಮದಲ್ಲಿ ನಡೆದ ಶೂಟೌಟ್ ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದೆ.

ಘಟನೆಯಲ್ಲಿ ಮೃತಪಟ್ಟ ಮೂವರ ಪೈಕಿ ಕನಿಷ್ಠ ಇಬ್ಬರ ಮೇಲೆ ಅತ್ಯಂತ ಹತ್ತಿರದಿಂದ ಗುಂಡು ಹಾರಿಸಲಾಗಿದೆ ಎಂದು ಮರಣೋತ್ತರ ಪರೀಕ್ಷೆಯ ವರದಿ ಬಹಿರಂಗಪಡಿಸಿದೆ. ಈ ವರದಿಯು ಅರಣ್ಯ ಇಲಾಖೆಯ ಆರಂಭಿಕ ಹೇಳಿಕೆಗಳನ್ನು ಸಂಪೂರ್ಣವಾಗಿ ಸುಳ್ಳಾಗಿಸಿದ್ದು, ತನಿಖಾ ಸಂಸ್ಥೆಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.ಮರಣೋತ್ತರ ಪರೀಕ್ಷೆಯ ಪ್ರಕಾರ, ಮೃತಪಟ್ಟ ಮೂವರಲ್ಲಿ ಸೆಬಾಸ್ಟಿಯನ್ ಡೇವಿಡ್ ಕುಮಾರ್ (36) ಮತ್ತು ಆಂಥೋನಿಸ್ವಾಮಿ ಪಿ. (50) ಅವರಿಗೆ ಹತ್ತಿರದಿಂದ ಶಾಟ್‌ಗನ್‌ನಿಂದ ಗುಂಡು ಹಾರಿಸಲಾಗಿತ್ತು. ಇಬ್ಬರೂ ಗಾಯಗಳಿಂದ ಉಂಟಾದ ಅತಿಯಾದ ರಕ್ತಸ್ರಾವ ಮತ್ತು ಆಘಾತದಿಂದ ಮೃತಪಟ್ಟಿದ್ದಾರೆ ಎಂದು ವರದಿ ತಿಳಿಸಿದೆ. ಸೆಬಾಸ್ಟಿಯನ್, ಆಂಥೋನಿಸ್ವಾಮಿ ಹಾಗೂ ಜಾನ್ ರೋಸ್ ಪೀಟರ್ (42) ಎಂಬ ಮೂವರನ್ನು ಆಗಸ್ಟ್ 15ರಂದು ಕರ್ನಾಟಕ-ತಮಿಳುನಾಡು ಗಡಿ ಸಮೀಪದ ಕಾವೇರಿ ವನ್ಯಜೀವಿ ಧಾಮದೊಳಗೆ ಅರಣ್ಯ ಸಿಬ್ಬಂದಿ ಗುಂಡಿಕ್ಕಿ ಹತ್ಯೆ ಮಾಡಿದ್ದರು. ಇವರೊಂದಿಗೆ ಇದ್ದ ಎನ್ನಲಾದ ಮತ್ತೊಬ್ಬ ವ್ಯಕ್ತಿ ಮಹಿಮಾ ದಾಸ್ ಸ್ಥಳದಿಂದ ಪರಾರಿಯಾಗಿದ್ದ.


ಉದಯವಾಹಿನಿ ಚಿತ್ರ

ಈ ನಾಲ್ವರು ಶಸ್ತ್ರಾಸ್ತ್ರಗಳೊಂದಿಗೆ ಕಾಡಿನೊಳಗೆ ಪ್ರವೇಶಿಸಿ ಜಿಂಕೆಯನ್ನು ಬೇಟೆಯಾಡಿದ್ದರು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಸಿದ್ದರು. ಅವರನ್ನು ಗಮನಿಸಿದ ಅರಣ್ಯ ಸಿಬ್ಬಂದಿ ಶರಣಾಗುವಂತೆ ಸೂಚಿಸಿದಾಗ, ಅವರು ಪ್ರತಿಯಾಗಿ ಗುಂಡು ಹಾರಿಸಿದರು. ಆತ್ಮರಕ್ಷಣೆಗಾಗಿ ಅರಣ್ಯ ಸಿಬ್ಬಂದಿ ಗುಂಡು ಹಾರಿಸಿದ್ದು, ಪರಿಣಾಮ ಮೂವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದರು.

## ಮೈಸೂರಲ್ಲಿ 5.57 ಲಕ್ಷ ಮತದಾರರ ಹೆಸರು ಡಿಲೀಟ್: ನರಸಿಂಹರಾಜ ಕ್ಷೇತ್ರದಲ್ಲಿ ಅತಿಹೆಚ್ಚು ರದ್ದು, ಮತಗಟ್ಟೆಗಳ ಸಂಖ್ಯೆ ಹೆಚ್ಚಳ

• ಉದಯವಾಹಿನಿ, ಮೈಸೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಜಿಲ್ಲೆಯಲ್ಲಿ ಸಿದ್ಧಗೊಂಡಿರುವ 22,42,452 ಜನರ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ.

ನಾನಾ ಕಾರಣಗಳಿಂದಾಗಿ 5,57,241 ಮತದಾರರನ್ನು ಕೈಬಿಡಲಾಗಿದೆ. ಭಾರತ ಚುನಾವಣಾ ಆಯೋಗದ ಆದೇಶದಂತೆ ಜೂ. 30ರಿಂದ ಆ. 17ರ ಅಂತ್ಯದವರೆಗೆ ಮೈಸೂರು ಜಿಲ್ಲೆಯಲ್ಲೂ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ ನಡೆಸಲಾಗಿದೆ. ಜಿಲ್ಲೆಯಲ್ಲಿ ಮೊದಲು 27,99,683 ಮತದಾರರಿದ್ದರು. ಆದರೆ, ಇದೀಗ ಕರಡು ಪಟ್ಟಿಯಂತೆ, 22,42,452 ಮಂದಿ ಇದ್ದಾರೆ. ಒಟ್ಟು 5,57,241 ಮಂದಿಯ (ಶೇ. 19.90) ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಕರಡು ಮತದಾರರ ಪಟ್ಟಿಯಂತೆ ಜಿಲ್ಲೆಯಲ್ಲಿ 10,98,058 ಪುರುಷರು, 11,44,256 ಮಹಿಳೆಯರು ಹಾಗೂ 138 ಲೈಂಗಿಕ ಅಲ್ಪಸಂಖ್ಯಾತರು (ತೃತೀಯ ಲಿಂಗಿಗಳು) ಮತದಾರರಿದ್ದಾರೆ. ಪುರುಷರಿಗಿಂತ 46,198 ಮಹಿಳಾ ಮತದಾರರ ಸಂಖ್ಯೆಯೇ ಹೆಚ್ಚು. ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇರುವವರಲ್ಲೂ ಮ್ಯಾಪಿಂಗ್ ಆಗಿಲ್ಲದೇ ಇರುವ ಹಾಗೂ ತಾರ್ಕಿಕ ಕಾರಣ ದಿಂದಾಗಿ ವ್ಯತ್ಯಾಸಗಳ 1,28,124 ಮಂದಿಗೆ ಮತದಾರರ ನೋಂದಣಾಧಿಕಾರಿಗಳ ಮೂಲಕ ನೋಟಿಸ್ ಜಾರಿಗೊಳಿಸಲಾಗುವುದು. ಅವರು ಅಗತ್ಯ ದಾಖಲೆಗಳನ್ನು ಸಲ್ಲಿಸಿ ನೋಂದಣಿ ಮಾಡಿಸಿಕೊಳ್ಳಬಹುದು ಎಂದು ಜಿಲ್ಲಾಡಳಿತ ತಿಳಿಸಿದೆ.

ನೋಟಿಸ್ ತಲುಪಿದವರು ವಿಚಾರಣೆಗೆ ಹಾಜರಾಗಿ ಮತದಾರರ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು 3 ಹಂತದಲ್ಲಿಅವಕಾಶ ಕಲ್ಪಿಸಲಾಗಿದೆ. ನೋಟಿಸ್ ಪಡೆದಿರುವ


ಉದಯವಾಹಿನಿ ಚಿತ್ರ

ಮತದಾರರೇ ಖುದ್ದಾಗಿ ವಿಚಾರಣೆಗೆ ಹಾಜರಾಗಬೇಕಿದೆ. ಇದರೊಂದಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಆ.24 ರಿಂದ ಸೆ. 23ರವರೆಗೆ ಅವಕಾಶ ಕಲ್ಪಿಸಲಾಗಿದೆ,'' ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ. ಈ ಅವಧಿಯಲ್ಲಿ ಸಂಬಂಧಿಸಿದ ಮತಗಟ್ಟೆ ಅಧಿಕಾರಿಗಳು ನೋಟಿಸನ್ನು ಸಂಬಂಧಪಟ್ಟ ಮತದಾರರಿಗೆ ಜಾರಿ ಮಾಡುವರು. ಆ ನೋಟಿಸನ್ನು ಮತದಾರರು ಹಾಗೂ ಕುಟುಂಬದ ಸದಸ್ಯರು ಸ್ವೀಕರಿಸಬಹುದು.

ನೋಟಿಸ್ ಜಾರಿಗೊಳಿಸುವ ವೇಳೆ ಅಗತ್ಯವಿರುವ ದಾಖಲೆಗಳನ್ನು ಸ್ಥಳದಲ್ಲೇ ಸಲ್ಲಿಸಿ ಗಣಕೀಕರಣ ಮಾಡಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ, ಎಂದು ತಿಳಿಸಿದ್ದಾರೆ.

ಒಮ್ಮೆ ಆ ಸಮಯದಲ್ಲಿ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದವರು ವಿಚಾರಣೆಗೆ ಹಾಜರಾಗಿ ದಾಖಲೆಗಳನ್ನು ಸಲ್ಲಿಸಬಹುದು. ನಗರ ವ್ಯಾಪ್ತಿಯವರಿಗೆ ಉಪವಿಭಾಗಾಧಿಕಾರಿ, ತಾಲ್ಲೂಕು ಕಚೇರಿ ಹಾಗೂ ನಗರಸಭೆ ಕಚೇರಿಗಳಲ್ಲಿ ವಿಚಾರಣೆಗೆ ಹಾಜರಾಗಬಹುದು.

ಗ್ರಾಮಾಂತರ ಪ್ರದೇಶದವರು ಗ್ರಾಮ ಪಂಚಾಯಿತಿಗಳಲ್ಲಿ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು. ಅನುಪಸ್ಥಿತಿ, ಶಾಶ್ವತ ಸ್ಥಳಾಂತರ, ನಿಧನ, ಈಗಾಗಲೇ ನೋಂದಣಿ, ಇತರ (ಎಎಸ್‌ಡಿಡಿಬಿ) ಕಾರಣದಿಂದ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡಲಾಗಿದೆ.

## ಹಾರಂಗಿ ಜಲಾಶಯಕ್ಕೆ ಹೆಚ್ಚಿದ ಒಳಹರಿವು, ತಲಕಾವೇರಿಯಲ್ಲೂ ದಾಖಲೆಯ ವರ್ಷಧಾರೆ!

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಕಳೆದ ರಾತ್ರಿಯಿಂದ ನಿರಂತರವಾಗಿ ಭಾರಿ ಮಳೆಯಾಗುತ್ತಿದ್ದು, ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಜನಜೀವನ ಅಸ್ತವ್ಯಸ್ತವಾಗಿದೆ. ಹೌದು.. ಕೊಡಗಿನಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ಬೆಳಗ್ಗೆಯಿಂದಲೇ ಜಿಲ್ಲೆಯಾದ್ಯಂತ ಎಡೆಬಿಡದೆ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಕೊಡಗು ಜಿಲ್ಲೆಯಾದ್ಯಂತ ನದಿಗಳು, ಹಳ್ಳ-ಕೊಳ್ಳಗಳಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಮತ್ತಷ್ಟು ಮಳೆ ಮುಂದುವರಿದರೆ ಪ್ರವಾಹದ ಆತಂಕ ಎದುರಾಗಿದೆ. ಭಾಗಮಂಡಲದ ಪ್ರಸಿದ್ಧ ತ್ರಿವೇಣಿ ಸಂಗಮ ನೀರಿನಿಂದ ಭರ್ತಿಯಾಗಿದ್ದು, ನದಿ ನೀರು ಏರಿಕೆಯಾಗಿ ಸುತ್ತಮುತ್ತಲಿನ ಕೃಷಿ ಜಮೀನುಗಳಿಗೆ ನುಗ್ಗಿದೆ. ಸಂಗಮದ ನೀರು ಉಕ್ಕಿ ಹರಿದು ಐತಿಹಾಸಿಕ ಭಗಂಡೇಶ್ವರ ದೇವಸ್ಥಾನದ ಮೆಟ್ಟಿಲುಗಳವರೆಗೂ ತಲುಪಿದೆ. ನೀರಿನ ಮಟ್ಟ ಏರಿಕೆಯಿಂದ ದೇವಾಲಯದ ಎರಡು ಮೆಟ್ಟಿಲುಗಳು ಮುಳುಗಿವೆ.

ತಲಕಾವೇರಿಯಲ್ಲೂ ಅತಿ ಭಾರಿ ಮಳೆಯಾಗಿದ್ದು, ಇದರಿಂದ ಭಾಗಮಂಡಲದ ಸಂಗಮದಲ್ಲಿ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿದೆ. ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ಭಾಗಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದ್ದು, ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗಿದೆ. ತಗ್ಗು ಪ್ರದೇಶಗಳಲ್ಲಿ ಜಲಾವೃತದ ಆತಂಕವೂ ಹೆಚ್ಚಿದೆ. ಇದೇ ವೇಳೆ ಕುಮಾರ ಪರ್ವತ, ಬಿಸಿಲೆ ಘಾಟ್ ಹಾಗೂ ತಲಕಾವೇರಿ ಪ್ರದೇಶಗಳಲ್ಲಿ ಬೆಳಗ್ಗೆಯಿಂದಲೇ ಉತ್ತಮ ಮಳೆಯಾಗಿದೆ. ಜಿಲ್ಲೆಯ ಗಾಳಿ ಬೀಸುವ ಮತ್ತು ಗಾಳಿ ತಡೆಯುವ ಎರಡೂ ಬದಿಗಳಲ್ಲೂ ಮಳೆಯಾಗಿರುವುದು ವರದಿಯಾಗಿದೆ. ನಿರಂತರವಾಗಿ ನೀರು ಹರಿದುಬರುತ್ತಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ವಿವಿಧ ನದಿಗಳು ಮತ್ತು ಹಳ್ಳಗಳ ನೀರಿನ ಮಟ್ಟ ಏರುತ್ತಿದೆ. ಮಳೆ ಇದೇ ರೀತಿ ಮುಂದುವರಿದರೆ ಪ್ರವಾಹ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ ಸ್ಥಳೀಯ ಅಧಿಕಾರಿಗಳು ಪರಿಸ್ಥಿತಿಯ ಮೇಲೆ ನಿಗಾ ವಹಿಸಿದ್ದಾರೆ.

# ರಾಮನಗರದಲ್ಲಿ ಅನ್ನಭಾಗ್ಯ ಅಕ್ಕಿಗಾಗಿ ಫಲಾನುಭವಿಗಳ ಪರದಾಟಕ್ಕೆ ಬ್ರೇಕ್

• ಉದಯವಾಹಿನಿ, ರಾಮನಗರ

1 ಸೆ.1ರಿಂದ ಮತ್ತೆ ಇ-ಕೆವೈಸಿ
2 ಎಲ್ಲರಿಗೂ ಕೆವೈಸಿ ಕಡ್ಡಾಯ
3 ಬಯೋಮೆಟ್ರಿಕ್‌ಗೆ ಅವಕಾಶ

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಅನ್ನಭಾಗ್ಯ ಯೋಜನೆಯಡಿ ಪಡಿತರ ಪಡೆಯಲು ಕಡ್ಡಾಯಗೊಳಿಸಿದ್ದ ಇ-ಕೆವೈಸಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇದರಿಂದ ಅನ್ನಭಾಗ್ಯ ಅಕ್ಕಿ ಪಡೆಯಲು ನ್ಯಾಯಬೆಲೆ ಅಂಗಡಿಗಳಲ್ಲಿ ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲುತ್ತಿದ್ದ ಫಲಾನುಭವಿಗಳ ಪರದಾಟಕ್ಕೆ ಸದ್ಯಕ್ಕೆ ಬ್ರೇಕ್ ಬಿದ್ದಂತಾಗಿದೆ.

ಪಡಿತರ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಐದು ವರ್ಷ ಪೂರ್ಣಗೊಂಡ ಫಲಾನುಭವಿಗಳಿಗೆ ಮತ್ತೊಮ್ಮೆ ಇ-ಕೆವೈಸಿ ಮಾಡಿಸುವುದನ್ನು ಕಡ್ಡಾಯಗೊಳಿಸಿತ್ತು. ಇ-ಕೆವೈಸಿ ಹಾಗೂ ಪಡಿತರ ವಿತರಣೆ ಏಕಕಾಲದಲ್ಲಿ ನಡೆಯುತ್ತಿದ್ದ ಪರಿಣಾಮ ಸರ್ವರ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡು ಜಿಲ್ಲೆಯಾದ್ಯಂತ ಪಡಿತರ ವಿತರಣೆಯಲ್ಲಿ ಭಾರಿ ವಿಳಂಬವಾಗುತ್ತಿತ್ತು.

ಇದರ ಜತೆಗೆ ಈ ತಿಂಗಳು ಎರಡು ತಿಂಗಳ ಪಡಿತರ ಅಕ್ಕಿಯನ್ನು ಒಟ್ಟಿಗೆ ವಿತರಿಸಲಾಗುತ್ತಿದೆ. ಹೀಗಾಗಿ ಪ್ರತಿ ಗ್ರಾಹಕರು ಎರಡು ಬಾರಿ ಬಯೋಮೆಟ್ರಿಕ್ ನೀಡಬೇಕಾದ ಅನಿವಾರ್ಯತೆ ಎದುರಾಗಿತ್ತು. ಒಂದೆಡೆ ಡಬಲ್ ಬಯೋಮೆಟ್ರಿಕ್, ಮತ್ತೊಂದೆಡೆ ಇ-ಕೆವೈಸಿ ದೃಢೀಕರಣ ನಡೆದಿದ್ದರಿಂದ ಸರ್ವರ್



ಉದಯವಾಹಿನಿ ಚಿತ್ರ

ಇದೀಗ ಸಾರ್ವಜನಿಕರ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಇ-ಕೆವೈಸಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಸೆ.1ರಿಂದ ಮತ್ತೆ ಇ-ಕೆವೈಸಿ ಪ್ರಕ್ರಿಯೆ ಆರಂಭವಾಗಲಿದ್ದು, ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಕಾಶ ನೀಡಲಾಗುವುದು ಎಂದು ತಿಳಿಸಿದೆ.-ಇಲಾಖೆ

ಮೇಲೆ ವಿಪರೀತ ಒತ್ತಡ ಉಂಟಾಗಿ ಪದೇಪದೆ ಸಂಪರ್ಕ ಕಡಿತಗೊಳ್ಳುತ್ತಿತ್ತು. ಗಂಟೆಗಟ್ಟಲೆ ಸರದಿಯಲ್ಲಿ ನಿಂತರೂ ಕೆಲಸವಾಗದೇ ಫಲಾನುಭವಿಗಳು ತೀವ್ರ ತೊಂದರೆ ಅನುಭವಿಸುವಂತಾಗಿತ್ತು. ಸದ್ಯ ಪಡಿತರ ವಿತರಣೆಗೆ ಆದ್ಯತೆ ನೀಡಲಾಗಿದ್ದು, ಇ-ಕೆವೈಸಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸೆ.1ರಿಂದ ಪುನರಾರಂಭವಾಗಲಿದ್ದು, ಸೆ. ಅಂತ್ಯದವರೆಗೆ ಇ-ಕೆವೈಸಿ ಪೂರ್ಣಗೊಳಿಸಲು ಅವಕಾಶ ನೀಡಲಾಗುವುದು. ಹೀಗಾಗಿ ಸದ್ಯ ಪಡಿತರ ಪಡೆಯಲು ಬರುವ ಫಲಾನುಭವಿಗಳು ಇ-ಕೆವೈಸಿ ಕುರಿತು ಆತಂಕಪಡುವ ಅಗತ್ಯವಿಲ್ಲವೆಂದು

ಈ ಬಗ್ಗೆ ನಾವು ಮುಖ್ಯ ಕಚೇರಿಗೆ ಮಾಹಿತಿ ನೀಡಿದ್ದೇವೆ. ಹೀಗಾಗಿ ಸದ್ಯ ಪಡಿತರ ವಿತರಣೆ ಮುಗಿಯುವವರೆಗೆ ಇ-ಕೆವೈಸಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸೆ.1ರಿಂದ ಮತ್ತೆ ಇ-ಕೆವೈಸಿ ಆರಂಭವಾಗಲಿದ್ದು, ತಿಂಗಳ ಅಂತ್ಯದವರೆಗೂ ಕಾಲಾವಕಾಶ ನೀಡಲಾಗಿದೆ ಎಂದಿದ್ದಾರೆ. ಶಿಲ್ಪಾ ಉಪನಿರ್ದೇಶಕರು

**ಇ-ಕೆವೈಸಿ ಮಾಡಿಸುವುದು ಕಡ್ಡಾಯ**

ಕೇಂದ್ರ ಸರಕಾರದ ನಿಯಮಾವಳಿಗಳ ಅನ್ವಯ ಅರ್ಹ ಫಲಾನುಭವಿಗಳನ್ನು ಪತ್ತೆಹಚ್ಚಲು ಪ್ರತಿ ಐದು ವರ್ಷಗಳಿಗೊಮ್ಮೆ ಇ-ಕೆವೈಸಿ ಮಾಡಿಸುವುದು ಕಡ್ಡಾಯವಾಗಿದೆ. ಪ್ರಸ್ತುತ ತಿಂಗಳ ಅಂತ್ಯವೇ ಇ-ಕೆವೈಸಿಗೆ ಕೊನೆಯ ದಿನ ಎಂದು ನಿಗದಿಪಡಿಸಿದ್ದರಿಂದ ಫಲಾನುಭವಿಗಳು ಒಮ್ಮೆಲೇ ನ್ಯಾಯಬೆಲೆ ಅಂಗಡಿಗಳಿಗೆ ಮುಗಿಬಿದ್ದಿದ್ದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕಿ ಶಿಲ್ಪಾ ತಿಳಿಸಿದ್ದಾರೆ. ಇ-ಕೆವೈಸಿ ವೇಳೆ ಸರ್ವರ್ ಸಮಸ್ಯೆ ಒಂದೆಡೆಯಾದರೆ, ಮತ್ತೊಂದೆಡೆ ಬಯೋಮೆಟ್ರಿಕ್‌ಗಾಗಿ ಪಡಿತರ ಚೀಟಿದಾರರ ಬೆರಳಚ್ಚು ಪಡೆಯುವಾಗಲೂ ಸಮಸ್ಯೆ ಎದುರಾಗುತ್ತಿದೆ ಎನ್ನಲಾಗಿದೆ. ಕೆಲವು ಕೃಷಿಕಾರ್ಮಿಕರು, ರೈತರು ಮತ್ತು ಗೃಹಿಣಿಯರ ಬೆರಳಚ್ಚು ಸರಿಯಾಗಿ ಹೊಂದಾಣಿಕೆಯಾಗುತ್ತಿಲ್ಲ. ಹತ್ತಾರು ವರ್ಷಗಳ ಹಿಂದೆ ಆಧಾರ್ ನೋಂದಣಿ ವೇಳೆ ನೀಡಿದ್ದ ಬೆರಳಚ್ಚಿಗೂ, ಪ್ರಸ್ತುತ ಬೆರಳಿನ ರೇಖೆಗಳಿಗೂ ವ್ಯತ್ಯಾಸವಾಗಿರುವುದರಿಂದ ಬಯೋಮೆಟ್ರಿಕ್ ವಿಫಲವಾಗುತ್ತಿದೆ. ಹೀಗಾಗಿ ಎರಡು-ಮೂರು ಬಾರಿ ಬಯೋಮೆಟ್ರಿಕ್ ಮಾಡಬೇಕಾಗಿ ಬಂದು ಪಡಿತರ ವಿತರಣೆಯಲ್ಲಿ ಮತ್ತಷ್ಟು ವಿಳಂಬವಾಗುತ್ತಿದೆ. ಬೆರಳಚ್ಚು ಹೊಂದಾಣಿಕೆಯಾಗದೇ ಸಮಸ್ಯೆಯಾಗುತ್ತಿರುವುದು ಈಗಾಗಲೇ ಇಲಾಖೆಯ ಗಮನಕ್ಕೂ ಬಂದಿದೆ.

## ಮಿನಿ ನ್ಯೂಸ್

### ಮನೆಗಳಲ್ಲಿ ಕಳೆಗಟ್ಟಿದ ಓಣಂ ಸಂಭ್ರಮ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ನೆಲೆಸಿರುವ ಕೇರಳೀಯರು ಬುಧವಾರ ತಮ್ಮ ಮನೆಗಳಲ್ಲಿ ಓಣಂ ಹಬ್ಬವನ್ನ ಸಡಗರ-ಸಂಭ್ರಮದಿಂದ ಆಚರಿಸಿದರು. ಕೇರಳ ಗಡಿಗೆ ಹೊಂದಿಕೊಂಡಿರುವ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸಾವಿರಾರು ಮಲೆಯಾಳಿ ಕುಟುಂಬಗಳು ನೆಲೆಸಿದ್ದು, ತಮ್ಮ ಮನೆಗಳಲ್ಲಿ ಶ್ರದ್ಧಾ-ಭಕ್ತಿಯಿಂದ ಓಣಂ ಹಬ್ಬ ಆಚರಿಸಿದರು. ಕೇರಳದ ರಾಜ ಮಹಾಬಲಿ ವರ್ಷಕ್ಕೊಮ್ಮೆ ಭೂಮಿಗೆ ಬರುತ್ತಾನೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಓಣಂ ಹಬ್ಬವನ್ನ ಆಚರಿಸಲಾಗುತ್ತದೆ.


ಉದಯವಾಹಿನಿ ಚಿತ್ರ

ಕೇರಳದಲ್ಲಿ ಹತ್ತು ದಿನಗಳ ಕಾಲ ನಡೆಯುವ ಓಣಂ ಹಬ್ಬದ ಕೊನೆಯ ದಿನವನ್ನ ತಾಲ್ಲೂಕಿನಲ್ಲಿರುವ ಮಲೆಯಾಳಿಗಳು ಸಂಪ್ರದಾಯಬದ್ಧವಾಗಿ ಆಚರಿಸುತ್ತಾ ಬಂದಿದ್ದಾರೆ. ಹಬ್ಬದ ಅಂಗವಾಗಿ ಮುಂಜಾನೆಯೇ ಮಹಿಳೆಯರು ಶುಭ್ರವಸ್ತ್ರ ಧರಿಸಿ, ಮಹಾಬಲಿ ಚಕ್ರವರ್ತಿಯನ್ನ ಸ್ವಾಗತಿಸುವ ಸಂಕೇತವಾಗಿ ಮನೆಗಳ ಮುಂಭಾಗದಲ್ಲಿ ವಿವಿಧ ಬಣ್ಣಗಳ ಹೂವುಗಳಿಂದ ಆಕರ್ಷಕ ಪುಷ್ಪ ರಂಗೋಲಿ (ಪೂಕಳಂ) ಬಿಡಿಸಿದರು.

ರಂಗೋಲಿಯ ಮಧ್ಯದಲ್ಲಿ ಹೂವುಗಳಿಂದ ಅಲಂಕರಿಸಿದ ದೀಪ ಬೆಳಗಿಸಿ ಪೂಜೆ ಸಲ್ಲಿಸಿದರು. ಪುರುಷರು ಸೇರಿದಂತೆ ಕುಟುಂಬದ ಸದಸ್ಯರು ಶ್ವೇತವಸ್ತ್ರ ಧರಿಸಿ, ಬಂಧು-ಬಾಂಧವರನ್ನ ಮನೆಗೆ ಆಹ್ವಾನಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು. ಮನೆಗಳಲ್ಲಿ ಸಾಂಪ್ರದಾಯಿಕ ಭೋಜನ ಸಿದ್ಧಪಡಿಸಿ ಕುಟುಂಬದ ಸದಸ್ಯರು ಹಾಗೂ ಬಂಧುಗಳೊಂದಿಗೆ ಹಬ್ಬವನ್ನ ಆಚರಿಸಿದರು.

### ಪಟೇಲ್ ಶಾಲೆಯಲದಲಿ ಪುಟಾಣಿ ಮಕ್ಕಳಿಗೆ ಹಸಿರಿನ ಅರಿವು ಕಾರ್ಯಕ್ರಮ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ನಗರದ ಮಾಗಡಿ ರಸ್ತೆ , ಕೆಂಪೇಗೌಡ ಸರ್ಕಲ್ , ಬಳಿ ಇರುವ ಪಟೇಲ್ ಪಬ್ಲಿಕ್ ಆಂಗ್ಲ ಶಾಲೆಯಲ್ಲಿ ಪುಟಾಣಿ ಚಿಣ್ಣರಿಗೆ ಹಸಿರಿನ ಹರಿವು ಕಾರ್ಯಕ್ರಮವನ್ನು ಸರಳ ಇಂಗ್ಲಿಷ್ ಕಲಿಕೆ ಶಿಕ್ಷಕರಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಕುರಿತು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ ರಾಜು ಮಾತನಾಡಿ ಸಣ್ಣ ಮಕ್ಕಳಿಗೆ ವಸ್ತುಗಳ ರೂಪದಲ್ಲಿ ಹಸಿರಿನ ಮಹತ್ವವನ್ನು ತೋರಿಸುವುದು ಒಂದು ಉತ್ತಮ ಬೆಳವಣಿಗೆ ಈ ಬೆಳವಣಿಗೆಯಿಂದ ಸಣ್ಣ ಸಣ್ಣ ಮಕ್ಕಳು ಗುರುತಿಸುವಿಕೆ, ಸಂಗ್ರಹಿಸುವಿಕೆ ಹಸಿರನ್ನ ರಕ್ಷಿಸುವುದು, ಮನಸ್ಸಿನಲ್ಲಿ ಗ್ರಹಿಕೆ ಸಮತೋಲನ ಏರ್ಪಡುತ್ತದೆ.

ಸಣ್ಣ ಸಣ್ಣ ಮಕ್ಕಳು ನೀರನ್ನು ಮಿತವಾಗಿ ಬಳಸುವ ಪ್ರಯೋಗ, ಜೊತೆಗೆ ಪರಿಸರವನ್ನ ರಕ್ಷಿಸುವ ಪ್ರಯೋಗಗಳ ಅರಿವನ್ನು ಮೂಡಿಸುವ ಜಾಗೃತಿ ಕಾರ್ಯಕ್ರಮವನ್ನು ಸಣ್ಣ ಮಕ್ಕಳು ಪ್ರಾಯೋಗಿಕವಾಗಿ ತೋರ್ಪಡಿಸಿಕೊಟ್ಟರು. ಶಾಲೆಯಲ್ಲಿ ಸಣ್ಣ ಮಕ್ಕಳು ಹಸಿರನ್ನು ರಕ್ಷಿಸಿ ಕಾರ್ಯಕ್ರಮದಲ್ಲಿ ಸಣ್ಣ ಸಣ್ಣ ಕಿರು ಚಿತ್ರಗಳನ್ನ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಸಿಬ್ಬಂದಿ ಭಾಗವಹಿಸಿದ್ದರು.

### ಗುಡಿಬಂಡೆ ಬಂದ್: ಬಸ್ ಡಿಪೊ ಸ್ಥಾಪನೆಗಾಗಿ ಸಾರಿಗೆ ಘಟಕ ಹೋರಾಟ ಸಮಿತಿ ಆಗ್ರಹ

• ಉದಯವಾಹಿನಿ, ಗುಡಿಬಂಡೆ

ತಾಲ್ಲೂಕು ಕೇಂದ್ರದಲ್ಲಿ ಸರ್ಕಾರಿ ಬಸ್ ಡಿಪೊ ಸ್ಥಾಪನೆಗಾಗಿ ಆಗ್ರಹಿಸಿ ಸಾರಿಗೆ ಘಟಕ ಹೋರಾಟ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳು ಕರೆ ನೀಡಿದ್ದ ಗುಡಿಬಂಡೆ ಬಂದ್ ಶಾಂತಿಯುತವಾಗಿ ನಡೆಯಿತು.

ಹೋರಾಟಗಾರರು ಬಂದ್ ಹಿನ್ನೆಲೆ ಬೆಳಗ್ಗೆ 6 ಗಂಟೆಗೆ ರಸ್ತೆಗಿಳಿದರು. ಪಟ್ಟಣದ ಅಂಗಡಿ, ಮುಂಗಟ್ಟುಗಳು ಮುಚ್ಚಿ ಬಂದ್‌ಗೆ ಸಹಕರಿಸಿದರು. ಪಟ್ಟಣದ ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ಹೋಟೆಲ್‌ಗಳು ಬಾಗಿಲು ಹಾಕಿದ್ದರು. ಆಟೊ, ಖಾಸಗಿ ಬಸ್‌ಗಳ ಸಂಚಾರವಿತ್ತು.ಬೆಳಗ್ಗೆ ಸಾರಿಗೆ ಬಸ್ ನಿಲ್ದಾಣದಲ್ಲಿ ಸರ್ಕಾರಿ ಬಸ್ ಸಂಚಾರಕ್ಕೆ ಬಿಡದೆ ಹೋರಾಟಗಾರರು ಪ್ರತಿಭಟನೆ ನಡೆಸಿದರು. ನಂತರ ಅಂಬೇಡ್ಕರ್ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ಹೋರಾಟ ಸಮಿತಿಯ ಸಂಚಾಲಕ ಜಿ.ವಿ.ಗಂಗಪ್ಪ, 'ಡಿಪೊ ಸ್ಥಾಪನೆಗೆ ಜಮೀನು ಮಂಜೂರು ಮಾಡಿ 9 ವರ್ಷ ಕಳೆದರೂ ಘಟಕದ ಸ್ಥಾಪನೆಗೆ ಸರ್ಕಾರ ಹಾಗೂ ಅಧಿಕಾರಿಗಳು ಕಾಳಜಿ ವಹಿಸುತ್ತಿಲ್ಲ. ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಿಗೆ ಸಾರಿಗೆ ಘಟಕಗಳಿವೆ. ಆದರೆ, ಗುಡಿಬಂಡೆ ತಾಲ್ಲೂಕಿನಲ್ಲಿ ಮಾತ್ರ ಇಲ್ಲ' ಎಂದರು. ಸ್ಥಳಕ್ಕೆ ಡಿಟಿಓ ಮಂಜುನಾಥ್ ಭೇಟಿ ನೀಡಿ ಪ್ರತಿಭಟನಕಾರರ ಮನವಿ ಸ್ವೀಕರಿಸಿರು. ಸಾರಿಗೆ ಘಟಕ ಸ್ಥಾಪನೆಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು. ಸಾರಿಗೆ ಘಟಕ ಸ್ಥಾಪನಾ ಹೋರಾಟ ಸಮಿತಿ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

### ಮಹದೇಶ್ವರ ಬೆಟ್ಟದಲ್ಲಿ ಕಾಮಗಾರಿ ಪರಿಶೀಲಿಸಿದ ಶಾಸಕ ಮಂಜುನಾಥ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಹದೇಶ್ವರ ಬೆಟ್ಟ

ಹನೂರು ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಆರ್. ಮಂಜುನಾಥ್ ಈಚೆಗೆ ಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ವಿವಿಧ ಇಲಾಖೆಗಳಿಂದ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ, ಗುಣಮಟ್ಟ ಪರಿಶೀಲಿಸಿದ ಶಾಸಕರು ಮೂಲಸೌಕರ್ಯಗಳ ಲಭ್ಯತೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಮಹದೇಶ್ವರ ಬೆಟ್ಟಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕುಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕ ಕಾಮಗಾರಿಗಳ ಅನುಷ್ಠಾನಕ್ಕೆಆದ್ಯತೆ ನೀಡಲಾಗುವುದು ಎಂದುಭರವಸೆ ನೀಡಿದರು.ಪ್ರಾಧಿಕಾರದ ಕಾರ್ಯದರ್ಶಿ ಪುರುಷೋತ್ತಮ್, ಲೋಕೋಪಯೋಗಿ ಇಲಾಖೆಯ ಎಇಇ ಚಿನ್ನಣ್ಣ ಭಾಗವಹಿಸಿದ್ದರು.

# ನಾಲೆಯ ಮೇಲ್ಭಾಗಕ್ಕೆ ನೀರು, ಕೊನೆಯ ಭಾಗದ ರೈತರಿಗೆ ಬರ!

## ನಾರಾಯಣಪುರ ಎಡದಂಡೆ ನಾಲೆಯಲ್ಲಿ ಹೂಳು, ಗಿಡಗಂಟಿ; ನೀರಿಗಾಗಿ ಅನ್ನದಾತರ ಪರದಾಟ

• **ಇಲಿಯಾಸ್ ಪಟೇಲ್. ಬಳಗಾನೂರ**

• **ಉದಯವಾಹಿನಿ ಯಾದಗಿರಿ:**

ವರ್ಷಪೂರ್ತಿ ಕಷ್ಟಪಟ್ಟು ಬೆಳೆ ಬೆಳೆಯಬೇಕಾದ ಯಾದಗಿರಿ ಜಿಲ್ಲೆಯ ಸುರಪುರ ಹಾಗೂ ಶಹಾಪುರ ತಾಲ್ಲೂಕಿನ ಕೊನೆಯ ಭಾಗದ ರೈತರು ಇಂದು ಹನಿ ನೀರಿಗಾಗಿ ಕಣ್ಣೀರು ಹಾಕುವಂತಾಗಿದೆ. ಕೃಷ್ಣಾ ನದಿಯಿಂದ ಬಿಡುವ ನೀರು ಮೇಲ್ಭಾಗದ ಜಮೀನುಗಳಿಗೆ ಸಮೃದ್ಧವಾಗಿ ತಲುಪುತ್ತಿದ್ದರೂ, ನಾಲೆಯ ಕೊನೆಯ ಭಾಗದಲ್ಲಿರುವ ಸಾವಿರಾರು ಎಕರೆ ಜಮೀನುಗಳು ಮಾತ್ರ ನೀರಿಲ್ಲದೆ ಬಿರುಕು ಬಿಡುತ್ತಿವೆ.

**ಹೂಳು ಎತ್ತುವಿಕೆಯಲ್ಲಿ ಗೋಲ್ ಮಾಲ್:** ನಾರಾಯಣಪುರ ಎಡದಂಡೆ ನಾಲೆ ಹಾಗೂ ಅದರ ಉಪನಾಲೆಗಳಲ್ಲಿ ವರ್ಷಾನುಪತಿ ಹೂಳು ತೆಗೆಯಲು ಮತ್ತು ದುರಸ್ತಿಗೆ ಲಕ್ಷಾಂತರ ರೂಪಾಯಿ ಹಣ ಬಿಡುಗಡೆಯಾಗುತ್ತದೆ. ಆದರೆ, ಕೇವಲ ಜೆಸಿಬಿ ಯಂತ್ರಗಳನ್ನು ನಿಲ್ಲಿಸಿ ಫೋಟೋ ತೆಗೆಸಿಕೊಳ್ಳುವ ಅಧಿಕಾರಿಗಳು, ಹೂಳೆತ್ತುವ ಕಾಮಗಾರಿಯನ್ನು ಕೇವಲ ಕಾಗದದ ಮೇಲೆ ಮುಗಿಸುತ್ತಿದ್ದಾರೆ ಎನ್ನುವುದು ರೈತರ ಗಂಭೀರ ಆರೋಪ. ನಾಲೆಯಲ್ಲಿ ಕಳೆ ಗಿಡಗಳು,





ಉದಯವಾಹಿನಿ ಚಿತ್ರ

ಗಿಡಗಂಟಿಗಳು ಬೆಳೆದು ನಿಂತಿದ್ದರೂ ಸ್ವಚ್ಛಗೊಳಿಸುವ ಕನಿಷ್ಠ ಸೌಜನ್ಯವನ್ನು ನೀರಾವರಿ ಇಲಾಖೆ ತೋರುತ್ತಿಲ್ಲ.

**ಕೊನೆಯ ಭಾಗದ ರೈತರ ಗೋಳು:** ನಾವು ಕಾಲುವೆ ಕೊನೆಯಲ್ಲಿದ್ದೇವೆ ಎನ್ನುವುದೇ ನಮಗೆ ಶಾಪವಾಗಿದೆ. ವರ್ಷಕ್ಕೊಮ್ಮೆ ನೀರು ಬರುತ್ತದೆ ಎಂದು ಸಾಲ-ಸೋಲ ಮಾಡಿ ಬೆಳೆ ಇಡುತ್ತೇವೆ. ಆದರೆ, ನಾಲೆಗೆ ನೀರು ಬಿಟ್ಟು ವಾರಗಳೇ ಕಳೆದರೂ ನಮ್ಮ ಜಮೀನಿಗೆ ಒಂದು ಹನಿ ನೀರು ತಲುಪುವುದಿಲ್ಲ. ನೀರಿಲ್ಲದೆ ಪೈರುಗಳು ಕಣ್ಣೆದುರೇ ಒಣಗಿ ಹೋಗುತ್ತಿವೆ ಎಂದು ಅಳಲು ತೋಡಿಕೊಳ್ಳುತ್ತಾರೆ ಸ್ಥಳೀಯ ರೈತರು.

**ಸಮಸ್ಯೆಯ ಪ್ರಮುಖ ಮುಖ್ಯಾಂಶಗಳು:** ಆಡಳಿತಾತ್ಮಕ ಉದಾಸೀನತೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಅಧಿಕಾರಿಗಳ ಸೂಕ್ತ ಉಸ್ತುವಾರಿ ಕೊರತೆ.

**ನೀರಿನ ಅಕ್ರಮ ಬಳಕೆ:** ಮೇಲ್ಭಾಗದ ರೈತರು ಅಕ್ರಮವಾಗಿ ಪಂಪ್ ಸೆಟ್ ಇಟ್ಟು ನೀರು ಎತ್ತುತ್ತಿರುವುದನ್ನು ತಡೆಯಲು ವಿಫಲವಾದ ಗಸ್ತು ಸಿಬ್ಬಂದಿ.

**ಆರ್ಥಿಕ ನಷ್ಟ:** ನೀರಿಲ್ಲದೆ ಕಳೆದುಹೋಗುತ್ತಿರುವ ತೊಗರಿ, ಭತ್ತ ಹಾಗೂ ಹತ್ತಿ ಬೆಳೆಗಳು.

**ಸಾಲದ ಸುಳಿಯಲ್ಲಿ ರೈತ:** ಪ್ರತಿ ಎಕರೆಗೆ ಹತ್ತಾರು ಸಾವಿರ ಹೂಡಿಕೆ ಮಾಡಿ, ಕೊನೆಗೆ ಬೆಳೆ ಸಿಗದೆ ಸಾಲಗಾರರಾಗುತ್ತಿರುವ ಕೃಷಿಕರು.



**ಅಧಿಕಾರಿಗಳು ತಕ್ಷಣವೇ ಎಚ್ಚೆತ್ತುಕೊಂಡು ಉಪನಾಲೆಗಳಲ್ಲಿ ಕಟ್ಟಿಕೊಂಡಿರುವ ಹೂಳು ಮತ್ತು ಗಿಡಗಂಟಿಗಳನ್ನು ತೆರವುಗೊಳಿಸಬೇಕು. ನಾಲೆಯ ಕೊನೆಯ ಭಾಗದವರೆಗೂ ತಲುಪುವಂತೆ ನೀರು ನಿರ್ವಹಣೆ ವ್ಯವಸ್ಥಿತವಾಗಿ ಮಾಡಬೇಕು. ನಾಲೆಯ ಕೊನೆ ಹಂತಕ್ಕೆ ನೀರು ತಲುಪಿಸದಿದ್ದರೆ ಮುಂಬರುವ ದಿನಗಳಲ್ಲಿ ನೀರಾವರಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಹೋರಾಟ ಮಾಡಬೇಕಾಗುತ್ತೆ.**

**ಎಚ್. ಆರ್. ಬಡಿಗೇರ**
**( ರಾಜ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ )**

# ಹಾಳಾದ ಗ್ರಾಮೀಣ ರಸ್ತೆಗಳ ತುರ್ತು ದುರಸ್ತಿಗೆ ಶಾಸಕ ಪ್ರಭು ಚವ್ಹಾಣ ಒತ್ತಾಯ

• **ಉದಯವಾಹಿನಿ, ಕಮಲನಗರ:**

ಔರಾದ ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಕಳೆದ ವರ್ಷ ಸುರಿದ ಭಾರೀ ಮಳೆಯಿಂದ ಹಾನಿಗೊಳಗಾದ ಗ್ರಾಮೀಣ ರಸ್ತೆಗಳ ದುರಸ್ತಿ ಹಾಗೂ ಅಭಿವೃದ್ಧಿಪಡಿಸಬೇಕೆಂದು ಶಾಸಕರು ಹಾಗೂ ಮಾಜಿ ಸಚಿವರಾದ ಪ್ರಭು ಬಿ.ಚವ್ಹಾಣ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಸಚಿವರಾದ ಈಶ್ವರ ಖಂಡ್ರೆ ಅವರನ್ನು ಒತ್ತಾಯಿಸಿದ್ದಾರೆ

ಬೆಂಗಳೂರಿನಲ್ಲಿ ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ ಅವರು, ಕ್ಷೇತ್ರದ ಅನೇಕ ಗ್ರಾಮೀಣ ರಸ್ತೆಗಳು ಮಳೆಯಿಂದ ತೀವ್ರವಾಗಿ ಹಾನಿಗೊಳಗಾಗಿದ್ದು, ರಸ್ತೆಗಳು ಗುಂಡಿಮಯವಾಗಿವೆ. ಇದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ರೈತರು ಹಾಗೂ ವಾಹನ ಸವಾರರು ಪ್ರತಿನಿತ್ಯ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಮಮದಾಪೂರ-ಕುನಮಾರಪಳ್ಳಿ ಬಾರ್ಡರ್, ಏಕಂಬಾ-ಲಿಂಗಿ, ಹೊಳಸಮುದ್ರ-ತೋರ್ಣಾ, ಹಿಪ್ಪಳಗಾಂವ ರಸ್ತೆ, ಎನ್ ಎಚ್ 122 **ಭಂಡಾರಕುಮಟಾ ವಾಯಾ:** ಹಂದಿಕೇರಾ, ಧುಡುಕನಾಳ-ಬಾದಲಗಡಂವ, ಸುಸ್ಯೆಟಿ ತಾಂಡಾ-ಖೇಮಾ ನಾಯಕ್ ತಾಂಡಾ, ಕಾಳಾಪಟ್ಟಿ ತಾಂಡಾ ಸಂಪರ್ಕ ರಸ್ತೆ, ಚಿಮ್ಮೇಗಾಂವ-ಚಿರ್ಕಿ ತಾಂಡಾ, ಖೇಡ್ರಾ ಬಿ-ಹೊಕ್ರಾಣಾ, ಕರಂಜಿ ಬಿ-ದೇಗುಲವಾಡಿ, ಮುಂಗನಾಳ-ಗೌಂಡಗಾಂವ ಕ್ರಾಸ್, ನಿಡೋದಾ-ಹಾಲಳ್ಳಿ, ಹಸ್ಸಿಖೇರಾ-ತಾಂಡಾ, ಮುರ್ಗ್-ಎನ್ ಎಚ್ 50,

ಕಮಲನಗರ-ಸೋನಾಳ, ವಡಗಾಂವ-ಕೌಠಾ, ಧೂಪತಮಹಾಗಾಂವ-ಹೆಡಗಾಪೂರ, ಕುನಮಾರಪಳ್ಳಿ-ಎಂ.ಎಸ್ ಬಾರ್ಡರ್, ನಾಗೂರ ಎಂ ಸಂಪರ್ಕ ರಸ್ತೆ, ವಲ್ಲೇಪೂರ-ಕಂದಗೂಳ, ಹಸ್ಸಿಖೇರಾ-ಗೌಂಡಗಾಂವ, ಕಮಲನಗರ-ಸೋನಾಳವಾಡಿ, ಮುರ್ಗ್-ದೇವಣಿ,



**ತುರ್ತು ವೈದ್ಯಕೀಯ ಸೇವೆಗಾಗಿ ಆಸ್ಪತ್ರೆಗೆ ತೆರಳುವ ರೋಗಿಗಳು, ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ರೈತರು ತಮ್ಮ ಕೃಷಿ ಉತ್ಪನ್ನಗಳು ಮತ್ತು ದವಸ-ಧಾನ್ಯಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.**
**-ಶಾಸಕ ಪ್ರಭು ಚವ್ಹಾಣ**

ಚಿಕ್ಲಿ(ಜೆ)-ಜಂಬಗಿ, ಎನ್ ಎಚ್-15- ಕುನಮಾರಪಳ್ಳಿ ಬಾರ್ಡರ್, ವಾಗನಗೇರಾ-ವಾಗನಗೇರಾ ಕ್ರಾಸ್, ಎಕಲಾರ-ತೇಗಂಪೂರ, ಬಜರಂಗ್ ತಾಂಡಾ-ಚಿಂತಾಮಣಿ ತಾಂಡಾ, ಶಂಬೆಳ್ಳಿ-ಎನ್ ಎಚ್ ಸೇರಿದಂತೆ ಅತ್ಯಂತ ಅವಶ್ಯಕವಾಗಿರುವ ವಿವಿಧ ರಸ್ತೆಗಳನ್ನು ತುರ್ತು ಆದ್ಯತೆಯ ಮೇರೆಗೆ ಸುಧಾರಿಸಿ ಅಭಿವೃದ್ಧಿಪಡಿಸುವಂತೆ ತಿಳಿಸಿದ್ದಾರೆ.

# ಸಂಸ್ಕಾರ, ಸಂಸ್ಕೃತಿ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ

• **ಉದಯವಾಹಿನಿ ಸೈದಾಪುರ:**

ನಾಡಿನ ಸಂಸ್ಕಾರ, ಸಂಸ್ಕೃತಿ ಹಾಗೂ ಪಾರಂಪರಿಕ ಆಚರಣೆಗಳನ್ನು ಉಳಿಸಿ ಬೆಳೆಸುವುದರೊಂದಿಗೆ ಅವುಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಗುರುಮಠಕಲ್ ಖಾಸಾ ಮಠದ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.

ಸಮೀಪದ ಕಾಳೆಬೆಳಗುಂದಿ ಗ್ರಾಮದ ಶ್ರೀ ಬನದೇಶ್ವರ ದೇವಸ್ಥಾನದಲ್ಲಿ ಯಾದಗಿರಿ ಹಾಗೂ ರಾಯಚೂರು ಜಿಲ್ಲಾ ಗಾಣಿಗ ಸಮಾಜದ ವತಿಯಿಂದ ಆಯೋಜಿಸಿದ್ದ ಕಿರು ರಥೋತ್ಸವ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಧಾರ್ಮಿಕ ಆಚರಣೆಗಳು ಕೇವಲ ಸಂಪ್ರದಾಯಗಳಿಗೆ ಸೀಮಿತವಾಗದೆ ಸಮಾಜದಲ್ಲಿ ಒಗ್ಗಟ್ಟು, ಭಕ್ತಿ ಮತ್ತು ಸೌಹಾರ್ದತೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯುವಜನರು ನಮ್ಮ ನಾಡಿನ ಕಲೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಅರಿತು ಅವುಗಳ ಸಂರಕ್ಷಣೆಗೆ ಮುಂದಾಗಬೇಕು ಎಂದು ಶ್ರೀಗಳು ಕರೆ ನೀಡಿದರು.

ಬನದೇಶ್ವರ ದೇವರ ಕಿರು ರಥೋತ್ಸವವು ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ಅದ್ಧೂರಿಯಾಗಿ ನೆರವೇರಿತು. ಭಕ್ತರು ರಥವನ್ನು ಎಳೆದು ದೇವರ ದರ್ಶನ ಪಡೆದು, ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿದರು. ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮವೂ ಭಕ್ತಿಭಾವದಿಂದ ನಡೆಯಿತು.

**ಭಕ್ತಿ ಮತ್ತು ಸೌಹಾರ್ದತೆ ಬೆಳೆಸುವಲ್ಲಿ ಪ್ರಮುಖ ಪಾತ್ರ**

# ದಾನದಲ್ಲಿಯೇ ಶ್ರೇಷ್ಠವಾದ ದಾನ ರಕ್ತದಾನ,ಹಣ್ಣುಹಂಪಲು ವಿತರಿಸಿ:ಪೈಗಂಬರ್ ಜನ್ಮದಿನ ಸಂಭ್ರಮದಿಂದ ಆಚರಣೆ


## ಈದ್ ಎ - ಮಿಲಾದ್ ಉನ್ ನಬಿ: ಹಣ್ಣುಹಂಪಲು,ರಕ್ತದಾನ ಶಿಬಿರ,ಸಸಿ ನೆಡುವ ಕಾರ್ಯಕ್ರಮ

• **ಉದಯವಾಹಿನಿ,ಚಿಂಚೋಳಿ:**

ಪ್ರವಾದಿ ಮಹ್ಮುದ್ ಪೈಗಂಬರ್‌ರ ಜನ್ಮದಿನದ ಅಂಗವಾಗಿ ಈದ್ ಮಿಲಾದ್ ಉನ್ ನಬಿ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ,ಪೈಗಂಬರರು ಸಮಾಜದ ಸುಧಾರಣೆಯಲ್ಲಿ ಮಹತ್ವದ ಪಾತ್ರವಹಿಸಿದರು,ಜೀವನದಲ್ಲಿ ನಾವು ಗಳಿಸಿದ ಆಸ್ತಿಪಾಸ್ತಿ,ಅಂತಸ್ತು ಯಾವುದೇ ಶಾಶ್ವತವಲ್ಲ ಬದುಕಿರುವಾಗಲೇ ಇತರರಿಗೆ ಸಹಾಯವಾಗುವಂತೆ ಬದುಕು ಸಾಗಿಸಬೇಕು ಎಂದು ತಾಲ್ಲೂಕಾ ಮುಸ್ಲಿಂ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಮಸ್ತಾನ ಅಲಿ ಪಟ್ಟೇದಾರ ಹೇಳಿದರು.

ಪಟ್ಟಣದ ಮದೀನಾ ಮಸೀದ್‌ನಲ್ಲಿ ಮುಸ್ಲಿಂ ಅಭಿವೃದ್ಧಿ ಸಮಿತಿ ಹಾಗೂ ಜಮಾಯಾತೇ ಉಲ್ಮಾ ಸಂಘದಿಂದ ಈದ್ ಮಿಲಾದ್ ಉನ್ ನಬಿ ಹಬ್ಬದ ಅಂಗವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಹಣ್ಣುಹಂಪಲು,ಸಸಿ ನೆಡುವ ಕಾರ್ಯಕ್ರಮ,ಬೃಹತ್ ರಕ್ತದಾನ ಶಿಬಿರ ಮತ್ತು ವಿವಿಧ ಸಾಧಕರಿಗೆ ಸನ್ಮಾನ,ಹತ್ತನೇ,ಪಿಯುಸಿ ತರಗತಿಯಲ್ಲಿ ಉನ್ನತಮಟ್ಟದಲ್ಲಿ ಉತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ದಾನದಲ್ಲಿಯೇ ಅತ್ಯಂತ ಶ್ರೇಷ್ಠವಾದ ದಾನ ರಕ್ತದಾನವಾಗಿದೆ ಅನೇಕ ಬಾಣಂತಿಯರು,ಅಪಘಾತವಾದ ರೋಗಿಗಳು ಸಮಯಕ್ಕೆ ರಕ್ತ ಸಿಗದೆ ಪ್ರಾಣ ಕಳೆದುಕೋಳ್ಳುತ್ತಾರೆ ನಾವು ಮಾಡುವ ರಕ್ತದಾನದಿಂದ ನೂರಾರು ಜನರ ಪ್ರಾಣ ಉಳಿಸಬಹುದು,ಸಸಿ ನೆಡುವುದರಿಂದ ನೂರಾರು ಜನರಿಗೆ ನೆರಳು,ಆಮ್ಲಜನಕ ಸಿಗಬಹುದು,ರೋಗಿಗಳಿಗೆ ಹಣ್ಣುಹಂಪಲು ವಿತರಣೆಯಿಂದ ರೋಗಿಗಳಿಗೆ ಶಕ್ತಿ ವೃದ್ಧಿಯಾಗುತ್ತದೆ,ಉತ್ತಮ ಪಾಸ್ ಆದ ಮಕ್ಕಳಿಗೆ ಸನ್ಮಾನದಿಂದ ಮಕ್ಕಳೀಗೆ ಪ್ರೋತ್ಸಾಹ ಸಿಗುತ್ತದೆ ಎಂದರು.



ಉದಯವಾಹಿನಿ ಚಿತ್ರ

ಮುಸ್ಲಿಂ ಅಭಿವೃದ್ಧಿ ಸಮಿತಿ ಗೌರವಾಧ್ಯಕ್ಷ ಅಬ್ದುಲ್ ಬಾಷೀದ್ ಮಾತನಾಡಿ ಶಾಂತಿ ಸೌಹಾರ್ದತೆ ಭಾತೃತ್ವವನ್ನು ಒಳಗೋಂಡ ನಾಡನ್ನು ಕಟ್ಟುವಲ್ಲಿ ಪ್ರವಾದಿ ಮಹ್ಮುದ್ ಪೈಗಂಬರ್ ಬೋದನೆಗಳು ಸಮಾಜಕ್ಕೆ ಆದರ್ಶವಾಗಿದ್ದು ಸುಗಮ ಜೀವನಕ್ಕೆ ಪೈಗಂಬರ್ ಹಾಕಿಕೋಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು,ಸಿಟ್ಟು ಅಸುಹೆ,ದ್ವೇಶ ಮನಸಿನಲ್ಲಿ ತೆಗೆದುಹಾಕಿ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ದೇಶದಲ್ಲಿ ಬದುಕಬೇಕು,ಕಷ್ಟದಲ್ಲಿ ಇರುವರಿಗೆ ಸಹಾಯ ಮಾಡಬೇಕು ಎಂದರು.

ಬಡಿದರ್ಗಾದ ಸಜ್ಜಾದೆ ನಶೀನ್ ಸೈಯದ್‌ಶಾ ಅಕ್ಬರ ಹುಸ್ಸೆನಿ ಹಾಶ್ಮಿ ಸಾನಿಧ್ಯ ವಹಿಸಿದರು,ಡಿಟಿಒ ಡಾ.ಮಹ್ಮುದ್ ಗಫಾರ್,ಜಿಪಂ.ಮಾಜಿ ಸದಸ್ಯ ಸಂಜೀವನ್ ಯಾಕಾಪೂರ,ಕೆಎಂ ಬಾರಿ,ಅಹಾದ್ ಮುಫ್ತಿ ಮಾತನಾಡಿದರು,ಶಬ್ಬೀರ ಅಹೇಮದ್ ಸ್ವಾಗತಿಸಿದರು,ಜೀಯಾವುರ್ ರಹೇಮಾನ್ ನಿರೂಪಿಸಿದರು,ಮತೀನ್ ಸೌದಾಗಾರ ವಂದಿಸಿದರು.

ಗೋಪಾಲರಾವ ಕಟ್ಟಿಮನಿ,ಜಗನ್ನಾಥ ಕಟ್ಟಿ,ಮಹ್ಮುದ ಹಾದಿಸಾಬ,ಸತ್ಯನಾರಾಯಾಣ,ರೌಫ್ ಸಾಬ,ಸಾಬೇರ್,ಕಮಲ್‌ಖಾನ್,ಮಸೂದ ಸೌದಾಗಾರ,ಅಸ್ಮಾಂ ಸೌದಾಗಾರ,ಲಕ್ಷ್ಮಣ ಆವುಂಟಿ,ರಾಜು ಪವ್ಹಾರ,ರಾಮಶೇಟ್ಟಿ ಪವ್ಹಾರ,ಚಂದ್ರಶೇಟ್ಟಿ ಜಾಧವ,ಬೀಮಶೇಟ್ಟಿ ಮುರುಡಾ,ಗಣಪತರಾವ,ಅನ್ವರ್ ಖತೀಬ್,ವಿಜಯಕುಮಾರ,ಇದ್ರೀಸ್,ಎಸ್ಕೆ ಮೂಕ್ತಾರ್ ,ಹಾಫೀಜ್ ಅಬ್ದುಲ್ ಹಮೀದ್,ಎಂಕೆ ಖಾನ್,ಅಖೀಲ್,ಅಹೇಮದ್ ಬಾಗಬಾನ,ಶೇಕ್ ಫರೀದ್,ಹಸೇನ್,ಡಾ.ಅಬ್ದುಲ್ ಅಜೀಜ್,ಬಿಎಂ ಖಾನ್,ಶಾಬೋದ್ದೀನ್,ಹಾಫೀಜ್ ಇಸ್ಮಾಯಿಲ್,ಅನೇಕರಿದ್ದರು.

**36ಜನ ರಕ್ತದಾನ ಮಾಡಿದರು,ಆಸ್ಪತ್ರೇಯ ಬಡರೋಗಿಗಳಿಗೆ ಹಣ್ಣುಹಂಪಲು ವಿತರಣೆ,50ಸಸಿ ನೆಡುವ ಕಾರ್ಯಕ್ರಮ,ವಿವಿಧ ಕ್ಷೇತ್ರದ ಸಾಧಕರಾದ ಆಕ್ರಂಪಾಷ ಮೋಮಿನ್,ಮೋಯಿಜ್ ಪಟೇಲ್,ಡಾ,ಮಹ್ಮುದ್ ಗಫಾರ್,ಇದ್ರೀಸ್ ಮಾಸ್ಟರ್,ಡಾ. ಅಬ್ದುಲ್ ಅಜೀಜ್ ಇವರಿಗೆ ಸನ್ಮಾನಿಸಿ ಗೌರವಿಸಿದರು,ಹತ್ತನೇ ಮತ್ತು ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾದ ವಿಧ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರಶಸ್ತಿ ಪ್ರದಾನ,ಪೈಗಂಬರ್ ಸೀರಾತ್ ಕುರಿತು ನೋಡದೆ ಓದಿದ ವಿಧ್ಯಾರ್ಥಿಗಳಿಗೆ ಸನ್ಮಾನಿಸಿದರು,ಕಣ್ಣಿನ ತಪಾಸಣೆ ಹಾಗೂ ದಂತ ತಪಾಸಣೆ 120ಜನ ಸದುಪಯೋಗ ಪಡೆದುಕೋಂಡರು.**

# ಪುತ್ತೂರಿಗೆ ಐಜಿಪಿ ಭೇಟಿ: ಬಲವಂತದ ಬಂದ್ ನಡೆದಿಲ್ಲ- ಎಸ್ಪಿ

• **ಉದಯವಾಹಿನಿ ಪುತ್ತೂರು:**

ಈದ್‌ಮಿಲಾದ್ ಹಬ್ಬದ ಹಿನ್ನಲೆ ಮತ್ತು ಹಿಂದೂ ಜಾಗರಣಾ ವೇದಿಕೆ ನೀಡಿರುವ ಸ್ವಯಂಪ್ರೇರಿತ ಬಂದ್ ವಿಚಾರಕ್ಕೆ ಸಂಬಂಧಿಸಿದಂತೆ ಪುತ್ತೂರಿನ ಪರಿಸ್ಥಿತಿಯ ಅವಲೋಕನಕ್ಕಾಗಿ ಮಂಗಳವಾರ ಪಶ್ಚಿಮವಲಯ ಮಹಾ ಪೊಲೀಸ್ ನಿರೀಕ್ಷಕ (ಐಜಿಪಿ) ಅಮಿತ್ ಸಿಂಗ್ ಅವರು ಪುತ್ತೂರಿಗೆ ಭೇಟಿ ನೀಡಿದರು.

ಮಧ್ಯಾಹ್ನ 12 ಗಂಟೆ ಸುಮಾರಿಗೆ ಪುತ್ತೂರಿನ ದರ್ಬೆಯ ನಿರೀಕ್ಷಣಾ ಮಂದಿರಕ್ಕೆ ಆಗಮಿಸಿದ ಐಜಿಪಿ ಅಮಿತ್ ಸಿಂಗ್ ಅವರಿಗೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ ಮತ್ತು ಡಿವೈಎಸ್ಪಿ ಪ್ರಮೋದ್ ಕುಮಾರ್ ಬಿ ಅವರಿಂದ ಪುತ್ತೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಪರಿಸ್ಥಿತಿ ಮತ್ತು ಕೈಗೊಂಡಿರುವ ಭದ್ರತಾ ಕ್ರಮಗಳ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿದರು.

ದರ್ಬೆ ಘಟನೆಗೆ ಸಂಬಂಧಿಸಿ ಸಮರ್ಪಕವಾದ ತನಿಖೆ ನಡೆಸಿಯೇ ಕಾನೂನುಕ್ರಮ ಕೈಗೊಳ್ಳಲಾಗುವುದು. ನಾವು ಎಲ್ಲರನ್ನೂ ಸಮಾನವಾಗಿ ಕಂಡಿದ್ದು, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಆರೋಪಕ್ಕೆ ಸಂಬಂಧಿಸಿದ ಸೆಕ್ಷನ್ ಗಳಿಗೆ ಅನುಗುಣವಾಗಿ ನೋಟೀಸು ನೀಡುವುದು ಅಥವಾ ಬಂಧನ ಪ್ರಕ್ರಿಯೆ ನಡೆಯುತ್ತದೆ. ದಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ ತಿಳಿಸಿದರು.

# ಬಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ಮಾರಾಟ ತಡೆದು ಪುನರಾರಂಭಕ್ಕೆ ಆಗ್ರಹ

• **ಉದಯವಾಹಿನಿ ಬೀದರ್:**

ಜಿಲ್ಲೆಯ ರೈತರ ಜೀವನಾಡಿಯಾಗಿರುವ ಭಾಲ್ಕಿ ತಾಲ್ಲೂಕಿನ ಹಳ್ಳಿಖೇಡ (ಬಿ)ಯ ಬಿಎಸ್‌ಎಸ್‌ಕೆ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮಾರಾಟ ಮಾಡದೆ, ಸರ್ಕಾರವೇ ವಹಿಸಿಕೊಂಡು ಪುನರಾರಂಭಿಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಜಿಲ್ಲಾ ಘಟಕ ಹಾಗೂ ಬಿಎಸ್‌ಎಸ್‌ಕೆ ಕಾರ್ಮಿಕರ ಸಂಘ ಒತ್ತಾಯಿಸಿದ್ದಾರೆ.

ಈ ಕುರಿತು ಸಂಘಟನೆಗಳ ಮುಖಂಡರು ಮುಖ್ಯಮಂತ್ರಿ, ಸಹಕಾರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದ್ದಾರೆ. ಸಹಕಾರಿ ವಲಯದಲ್ಲಿ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದ್ದ ಬಿಎಸ್‌ಎಸ್‌ಕೆ ಕಾರ್ಖಾನೆ ಬೀದರ್ ಜಿಲ್ಲೆಯ ರೈತರ ಪ್ರಮುಖ ಆಧಾರವಾಗಿತ್ತು. ಕಾರ್ಖಾನೆಯನ್ನು ನಂಬಿಕೊಂಡು ಜಿಲ್ಲೆಯ ಸಾವಿರಾರು ಕುಟುಂಬಗಳು ಜೀವನ ನಡೆಸುತ್ತಿವೆ.ಆದರೆ ಆಡಳಿತ ಮಂಡಳಿಯ ದುರಾಡಳಿತದಿಂದಾಗಿ ಸರ್ಕಾರದ ಅನುಮತಿ ಯಿಲ್ಲದೆ ಕಾರ್ಖಾನೆಯನ್ನು ಅಕ್ರಮವಾಗಿ

**ಸಂಯುಕ್ತ ಕಿಸಾನ್ ಮೋರ್ಚಾ ಜಿಲ್ಲಾ ಘಟಕ**




ಉದಯವಾಹಿನಿ ಚಿತ್ರ

ಮುಚ್ಚಲಾಗಿದೆ ಎಂದು ಸಂಘಟನೆಗಳು ಆರೋಪಿಸಿದ್ದಾರೆ.

ಕಾರ್ಖಾನೆಯ ಮೇಲೆ 241.44 ಕೋಟಿ ಮೂಲ ಸಾಲ ಹಾಗೂ 189.40 ಕೋಟಿ ಬಡ್ಡಿ ಸೇರಿದಂತೆ ಒಟ್ಟು 430.84 ಕೋಟಿ ಸಾಲ ಇರುವುದಾಗಿ ಮನವಿಯಲ್ಲಿ ತಿಳಿಸಲಾಗಿದೆ. ಕಾರ್ಖಾನೆಯ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕು ಎಂದು ಸಂಘಟನೆಗಳು ಆಗ್ರಹಿಸಿದ್ದಾರೆ.

ಸಹಕಾರಿ ವಲಯದ ಬಿಎಸ್‌ಎಸ್‌ಕೆ ಕಾರ್ಖಾನೆಯನ್ನು ಮಾರಾಟ ಮಾಡಲು ಸಂಬಂಧಪಟ್ಟ ಸಂಸ್ಥೆ ನಿರ್ಧರಿಸಿರುವುದು ಖಂಡನೀಯ. ರೈತರ ಷೇರು ಹಣ ಹಾಗೂ ಕಾರ್ಖಾನೆಯ ಭೂಮಿಯನ್ನು ಪಟ್ಟಭದ್ರ ಹಿತಾಸಕ್ತಿಗಳು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ಮುಖಂಡರು ಆರೋಪಿಸಿದ್ದಾರೆ. ಆದ್ದರಿಂದ ಕಾರ್ಖಾನೆಯನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡಬಾರದು. ಸರ್ಕಾರವೇ ಕಾರ್ಖಾನೆಯನ್ನು ವಹಿಸಿಕೊಂಡು ಅಗತ್ಯ ಕ್ರಮ ಕೈಗೊಂಡು ಪುನಃ ಆರಂಭಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಕಾರ್ಖಾನೆ ಮಾರಾಟ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸದಿದ್ದರೆ ರೈತರು ಹಾಗೂ ಕಾರ್ಮಿಕರನ್ನು ಸಂಘಟಿಸಿಕೊಂಡು ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಬಿಎಸ್‌ಎಸ್‌ಕೆ ಕಾರ್ಮಿಕರ ಸಂಘ ಎಚ್ಚರಿಕೆ ನೀಡಿದ್ದಾರೆ.**

# ಪ್ರವಾಸಿ ತಾಣದಲ್ಲಿ ಮೂಲಸೌಕರ್ಯ ಕೊರತೆ, ಅಧಿಕಾರಿಗಳು, ಜನಪ್ರತಿನಿಧಿಗಳ ನಿರ್ಲಕ್ಷ್ಯ


## ಎರಡು ಜಿಲ್ಲೆಗಳ ಜನರಿಗೆ ನೀರು ಪೂರೈಸುವ ಜಲಾಶಯದ ಬಳಿ ಪ್ರವಾಸಿಗರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ

• **ಉದಯವಾಹಿನಿ ಹಾಸನ :**

ಹಾಸನದ ಪ್ರಮುಖ ಪ್ರವಾಸಿ ಸ್ಥಳದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಯಗಚಿ ಜಲಾಶಯದ ನೈಸರ್ಗಿಕ ಸೌಂದರ್ಯವನ್ನು ಪ್ರವಾಸಿಗರಿಗೆ ಮತ್ತಷ್ಟು ಹತ್ತಿರವಾಗಿಸುವುದರ ಜತೆಗೆ ಸ್ಥಳೀಯ

**1 : ದೀಪಗಳ ವ್ಯವಸ್ಥೆಯೂ ಅಸಮರ್ಪಕ**
**2 : ಶೌಚಾ ಕುಡಿಯುವ ನೀರಿನ ಕೊರತೆ**
**3 : ಫಲವತ್ತಾದ ಕೃಷಿ ಭೂಮಿ ಸಂಪೂರ್ಣ**

ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದೆ ಎನ್ನುವುದು ಜನತೆಯ ಒತ್ತಾಯ . ಆದರೆ ಜಲಾಶಯ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಸೂಕ್ತ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಸರಕಾರ ಮತ್ತು ಜನಪ್ರತಿನಿಧಿಗಳು ವಿಫಲವಾಗಿದೆ ಎನ್ನುವುದು ಆರೋಪವಾಗಿದೆ. ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಮತ್ತು ನೀರಾವರಿ ಒದಗಿಸುವ ಉದ್ದೇಶದಿಂದ ಕಾವೇರಿ ನದಿಯ ಉಪನದಿಯಾದ ಯಗಚಿ ನದಿಗೆ ಅಡ್ಡಲಾಗಿ ಜಲಾಶಯ ನಿರ್ಮಿಸಲಾಗಿದೆ. 2001ರಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಜಲಾಶಯವು ಒಟ್ಟು 3.36 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಬೇಲೂರಿನ ಐತಿಹಾಸಿಕ ಚೆನ್ನಕೇಶವ ದೇವಾಲಯಕ್ಕೆ ಆಗಮಿಸುವ



ಉದಯವಾಹಿನಿ ಚಿತ್ರ

ಪ್ರವಾಸಿಗರು ಯಗಚಿ ಜಲಾಶಯಕ್ಕೂ ಭೇಟಿ ನೀಡುವುದು ಸಾಮಾನ್ಯ. ಎರಡು ಜಿಲ್ಲೆಗಳ ಜನರಿಗೆ ನೀರು ಪೂರೈಸುವ ಜಲಾಶಯದ ಬಳಿ ಪ್ರವಾಸಿಗರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ ಮುಂಗಾರು ಮತ್ತು ಹಿಂಗಾರು ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಜಲಾಶಯದ ನೀರಿನ ಮಟ್ಟದಲ್ಲಿ ಏರಿಳಿತವಾಗುತ್ತದೆ.

ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ತಾಲ್ಲೂಕಿನ ಹಲವು ಗ್ರಾಮಗಳು ಹಾಗೂ ಸಾವಿರಾರು ಎಕರೆ ಫಲವತ್ತಾದ ಕೃಷಿ ಭೂಮಿ ಸಂಪೂರ್ಣ ಅಥವಾ ಭಾಗಶಃ ಮುಳುಗಡೆಯಾಗಿದೆ. ಬೇಲೂರಿನ ಐತಿಹಾಸಿಕ ಚೆನ್ನಕೇಶವ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರು ಯಗಚಿ ಜಲಾಶಯಕ್ಕೂ ಭೇಟಿ ನೀಡುವುದು ಸಾಮಾನ್ಯ. ಖಾಸಗಿ ಸಹಭಾಗಿತ್ವದಲ್ಲಿ ಯಗಚಿ ಜಲಕ್ರೀಡಾ ಕೇಂದ್ರ ಸ್ಥಾಪಿಸಲಾಗಿದ್ದು, ಸಾಹಸಮಯ ಜಲಕ್ರೀಡೆಗಳ ಸೌಲಭ್ಯವೂ ಇದೆ. ಆದರೆ ಪ್ರವಾಸಿಗರನ್ನು ಆಕರ್ಷಿಸುವ ಸಾಮರ್ಥ್ಯ ಹೊಂದಿರುವ ಜಲಾಶಯದ ಸುತ್ತಮುತ್ತ ಕನಿಷ್ಠ ಮೂಲಸೌಕರ್ಯಗಳೇ ಇಲ್ಲದಿರುವುದು ಪ್ರವಾಸಿಗರಿಗೆ ತೊಂದರೆ ಉಂಟುಮಾಡುತ್ತಿದೆ. ಜಲಾಶಯಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಸೂಕ್ತ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು ಪ್ರಮುಖ ಸಮಸ್ಯೆಯಾಗಿದೆ. ವಿಶೇಷವಾಗಿ ಮಹಿಳೆಯರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಎರಡು ಜಿಲ್ಲೆಗಳ ಜನರಿಗೆ ನೀರು ಪೂರೈಸುವ ಜಲಾಶಯದ ಬಳಿ ಪ್ರವಾಸಿಗರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ. ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

**ಜಲಾಶಯದ ಬಳಿ ಉದ್ಯಾನ ಸೇರಿದಂತೆ ಪ್ರವಾಸಿಗರ ಆಕರ್ಷಣೀಯ ತಾಣವನ್ನಾಗಿ ಅಭಿವೃದ್ಧಿಪಡಿಸಲು ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲು ಸರಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದಿದ್ದಾರೆ.**
**-ಎಚ್.ಕೆ.ಸುರೇಶ್, ಶಾಸಕ.**

**ಮುಖ್ಯರಸ್ತೆಯಿಂದ ಜಲಾಶಯದತ್ತ ಸಾಗುವ ರಸ್ತೆಗಳು ಹದಗೆಟ್ಟಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿದೆ. ರಾತ್ರಿ ವೇಳೆ ಸೂಕ್ತ ಬೀದಿ ದೀಪಗಳಿಲ್ಲದೆ ಪ್ರದೇಶ ಕತ್ತಲಲ್ಲಿ ಮುಳುಗುತ್ತದೆ. ಇದು ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದಲೂ ಆತಂಕಕ್ಕೆ ಕಾರಣವಾಗಿದೆ.**

**ಪ್ರವಾಸಿಗರು ತರುವ ಪ್ಲಾಸ್ಟಿಕ್ ಬಾಟಲಿ ಹಾಗೂ ಇತರ ತ್ಯಾಜ್ಯಗಳನ್ನು ಹಾಕಲು ಅಗತ್ಯ ಸಂಖ್ಯೆಯಲ್ಲಿ ಕಸದ ತೊಟ್ಟಿಗಳಿಲ್ಲ. ಪರಿಣಾಮ ಜಲಾಶಯದ ಸುತ್ತಮುತ್ತ ತ್ಯಾಜ್ಯ ಸಂಗ್ರಹವಾಗಿ ಪರಿಸರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ ಎಂಬುದು ಸ್ಥಳೀಯರ ದೂರು.**

ಯಗಚಿ ಕೇವಲ ನೀರು ಸಂಗ್ರಹಿಸುವ ಜಲಾಶಯವಾಗಿರದೆ, ಹಾಸನ ಜಿಲ್ಲೆಯ ಪ್ರಮುಖ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸುವ ಅಪಾರ ಅವಕಾಶ ಹೊಂದಿದೆ. ಸರಕಾರ ಹಾಗೂ ಪ್ರವಾಸೋದ್ಯಮ ಇಲಾಖೆ ಈ ಬಗ್ಗೆ ತಕ್ಷಣ ಗಮನಹರಿಸಿ ಸುಸಜ್ಜಿತ ಉದ್ಯಾನ, ಮಾಹಿತಿ ಕೇಂದ್ರ, ಶೌಚಾಲಯ, ಕುಡಿಯುವ ನೀರು, ರಸ್ತೆ ಹಾಗೂ ವಿದ್ಯುತ್ ದೀಪ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂಬುದು ಪ್ರವಾಸಿಗರು ಹಾಗೂ ಸ್ಥಳೀಯರ ಆಗ್ರಹವಾಗಿದೆ.

# ಮಿನಿ ನ್ಯೂಸ್

## ಕೆಎಸ್‌ಆರ್‌ಟಿಸಿ ಬಸ್-ಬೈಕ್ ಮುಖಾಮುಖಿ ಡಿಕ್ಕಿ; ಯುವಕನ ದುರ್ಮರಣ



• **ಉದಯವಾಹಿನಿ ಮುದ್ದೇಬಿಹಾಳ:**

ಸಾರಿಗೆ ಸಂಸ್ಥೆಯ ಬಸ್ ಮತ್ತು ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಯುವಕನೊಬ್ಬ ಸ್ಥಳದಲ್ಲೇ ಮೃತಪಟ್ಟ ಘಟನೆ ಪಟ್ಟಣದ ಹೊರವಲಯದ ಗೆದ್ದಲಮರಿ ಇಳಿಜಾರಿನ ರಸ್ತೆ ತಿರುವಿನಲ್ಲಿ ನಡೆದಿದೆ.ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಸಣ್ಣಚಾಪಿ ತಾಂಡಾ ನಿವಾಸಿ ಮಾರುತಿ ಚಂದಪ್ಪ ರಾಠೋಡ (19) ಮೃತಪಟ್ಟ ದುರ್ದೈವಿ.

ಬೆಳಗಾವಿಯಿಂದ ನಾಲತವಾಡ ಕಡೆಗೆ ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಮುದ್ದೇಬಿಹಾಳದಿಂದ ಗೆದ್ದಲಮರಿ ಗ್ರಾಮಕ್ಕೆ ತೆರಳುತ್ತಿದ್ದ ದ್ವಿಚಕ್ರ ವಾಹನದ ನಡುವೆ ಗೆದ್ದಲಮರಿ ಇಳಿಜಾರಿನ ಅಪಾಯಕಾರಿ ತಿರುವಿನಲ್ಲಿ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ತೀವ್ರ ಗಾಯಗೊಂಡ ಬೈಕ್ ಸವಾರ ಮಾರುತಿ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾನೆ. ಘಟನಾ ಸ್ಥಳಕ್ಕೆ ಮುದ್ದೇಬಿಹಾಳ ಪಿಎಸ್‌ಐ ಸಂಜಯ ತಿಪ್ಪಾರೆಡ್ಡಿ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ.

## 12 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕೈದಿಯ ಬಂಧನ

• **ಉದಯವಾಹಿನಿ ವಿಜಯಪುರ, :**

ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ವಿಜಯಪುರ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ವೇಳೆ 2014ರಲ್ಲಿ ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದ ಆರೋಪಿಯನ್ನು ವಿಜಯಪುರ ಗಾಂಧಿಚೌಕ್ ಠಾಣೆಯ ರೌಡಿ ನಿಗ್ರಹ ದಳದ ಸಿಬ್ಬಂದಿ 12 ವರ್ಷಗಳ ಬಳಿಕ ಬಂಧಿಸಿದ್ದಾರೆ. 2009ರ ಜೂನ್ 23ರಂದು ಬಾಗಲಕೋಟೆ ಜಿಲ್ಲೆಯ ಹುನಗುಂದ ಪೊಲೀಸ್ ಠಾಣೆಯಲ್ಲಿ ಕೃಷಿ ಅಧಿಕಾರಿ ಶಿವಪ್ಪ ಸಂಗಪ್ಪ ಗೂಳಪ್ಪನವರ ಅವರ ಕೊಲೆ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಮಹಿಳೆಯೊಬ್ಬರ ಸ್ನೇಹದ ಮೂಲಕ ಶಿವಪ್ಪ ಅವರನ್ನು ನಿರ್ಜನ ಸ್ಥಳಕ್ಕೆ ಕರೆದುಕೊಂಡು ಹೋಗಿ, ಅವರ ಬಳಿಯಿದ್ದ ಹಣ ಪಡೆದುಕೊಂಡು, ಖಾಲಿ ಚೆಕ್‌ಗೆ ಸಹಿ ಮಾಡಿಸಿಕೊಂಡ ಬಳಿಕ ಕೊಲೆ ಮಾಡಿದ್ದರು ಎಂದು ಪೊಲೀಸ್ ತನಿಖೆಯಲ್ಲಿ ತಿಳಿದುಬಂದಿತ್ತು. ಪ್ರಕರಣದ ತನಿಖೆ ನಡೆಸಿದ ಪೊಲೀಸರು ವಿಜಯಪುರ ಜಿಲ್ಲೆಯ ಬಬಲೇಶ್ವರ ನಿವಾಸಿ ಹನಮಂತ ಪಾಂಡುರಂಗ ಭಜಂತ್ರಿ, ಹಾಗೂ ಬಾಗಲಕೋಟೆ ಜಿಲ್ಲೆಯ ಮುಧೋಳ ನಿವಾಸಿ ಬಸವರಾಜ ಮಹಾಲಿಂಗಪ್ಪ ಪಾಟೀಲ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಬಾಗಲಕೋಟೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಇಬ್ಬರಿಗೂ ಜೀವಾವಧಿ ಶಿಕ್ಷೆ ವಿಧಿಸಿತ್ತು.

## ಮಾನವಕುಲಕ್ಕೆ ಶಾಂತಿ, ಕರುಣೆಯ ಸಂದೇಶ ಸಾರಿದ ಪ್ರವಾದಿ ಮಹಮ್ಮದ್

• **ಉದಯವಾಹಿನಿ ವಿಜಯಪುರ,**

ಪ್ರವಾದಿ ಮಹಮ್ಮದ್ ಅವರು ಮಾನವಕುಲಕ್ಕೆ ಶಾಂತಿ, ಸತ್ಯ, ಕರುಣೆ ಹಾಗೂ ಮಾನವೀಯತೆಯ ಮಾರ್ಗವನ್ನು ತೋರಿಸಿಕೊಟ್ಟ ಮಹಾನ್ ದಾರ್ಶನಿಕರಾಗಿದ್ದಾರೆ ಎಂದು ಹಾಸಿಂಪೀರ್ ದರ್ಗಾ ಪೀಠಾಧ್ಯಕ್ಷ ಸೈಯದ್ ಮುತರ್ಜಾ ಹುಸೇನ್ ಸಜ್ಜಾದೆ ನಶೀನ್ ಹೇಳಿದರು.

ಹಕೀಮ್ ವೃತ್ತದಲ್ಲಿ ನಡೆದ ಬೃಹತ್ ಮೆರವಣಿಗೆಯನ್ನು ಉದ್ಘಾಟಿಸಿ, ಪ್ರವಾದಿ ಮಹಮ್ಮದ್ ಅವರ ಜನ್ಮದಿನವಾದ ಈದ್ ಮಿಲಾದ್ ಅಂಗವಾಗಿ ಅವರು ಮಾತನಾಡಿದರು.

ಪ್ರವಾದಿ ಮಹಮ್ಮದ್ ಅವರು ಸರಳತೆ, ಸೌಹಾರ್ದತೆ, ಸಹೋದರತೆ ಹಾಗೂ ಭಾವೈಕ್ಯತೆಗೆ ಹೆಚ್ಚಿನ ಮಹತ್ವ ನೀಡಿದ್ದರು. ದಯೆ ಮತ್ತು ಕರುಣೆಯನ್ನು ಜೀವನದ ಅವಿಭಾಜ್ಯ ಭಾಗವಾಗಿಸಿಕೊಂಡು, ಅಜ್ಞಾನದ ಕತ್ತಲೆಯ ಕಾಲದಲ್ಲಿ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದರು ಎಂದು ಹೇಳಿದರು.ಯರನಾಳ ವಿರಕ್ತಮಠದ ಸಂಗನಬಸವ ಸ್ವಾಮೀಜಿ ಮಾತನಾಡಿ, ಪ್ರವಾದಿ ಮಹಮ್ಮದ್ ಅವರ ಸಂದೇಶಗಳು ಸಮಾಜದಲ್ಲಿ ಸೌಹಾರ್ದತೆ, ಸಹೋದರತ್ವ ಮತ್ತು ಭಾವೈಕ್ಯತೆಯನ್ನು ಬಲಪಡಿಸುವಂತಿವೆ. ಎಲ್ಲರೂ ಪರಸ್ಪರ ಪ್ರೀತಿ, ಗೌರವ ಹಾಗೂ ಸಹಬಾಳ್ವೆಯಿಂದ ಬದುಕಬೇಕು ಎಂದರು.

## 28ನೇ ವರ್ಷದ ಭಜನಾ ಕಮ್ಮಟದ ಪೂರ್ವಭಾವಿ ಸಭೆ

• **ಉದಯವಾಹಿನಿ ಧರ್ಮಸ್ಥಳ:**

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸೆಪ್ಟೆಂಬರ್ 28ರಿಂದ ಅಕ್ಟೋಬರ್ 4ರವರೆಗೆ ನಡೆಯಲಿರುವ 28ನೇ ವರ್ಷದ ಭಜನಾ ಕಮ್ಮಟದ ಪೂರ್ವಭಾವಿ ಸಭೆ ಮಂಗಳವಾರ ಮಹೋತ್ಸವ ಸಭಾಭವನದಲ್ಲಿ ನಡೆಯಿತು. ಭಜನಾ ಕಮ್ಮಟದ ಕಾರ್ಯದರ್ಶಿ ಎ. ವೀರು ಶೆಟ್ಟಿ ಮಾತನಾಡಿ,

ತಾಲ್ಲೂಕು ಹಾಗೂ ವಲಯ ಭಜನಾ ಪರಿಷತ್‌ಗಳ ಮೂಲಕ ಬೇಸಿಗೆ ರಜೆಯಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ, ಕಾನೂನು ಮಾಹಿತಿ ಮತ್ತು ಆರೋಗ್ಯ ಶಿಬಿರ, ಭಜನೋತ್ಸವ, ಮನೆ-ಮನೆ ಭಜನೆ, ಸತ್ಸಂಗ, ಶ್ರಮದಾನ, ಸ್ವಚ್ಛತಾ ಕಾರ್ಯಕ್ರಮ, ರಾಷ್ಟ್ರೀಯ ದಿನಾಚರಣೆ ಹಾಗೂ ಹಬ್ಬ-ಹರಿದಿನಗಳ ಆಚರಣೆ ಸೇರಿದಂತೆ ಹಲವು ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

''ಭಜನಾ ಪರಿಷತ್‌ನ ಚಟುವಟಿಕೆಗಳು ಸಮಾಜದಲ್ಲಿ ಧಾರ್ಮಿಕ ಜಾಗೃತಿ ಹಾಗೂ ಸಂಸ್ಕಾರಯುತ ಪರಿವರ್ತನೆಗೆ ಕಾರಣವಾಗಿವೆ. ಈ ವರ್ಷದ ಭಜನಾ ಕಮ್ಮಟದ ಪೂರ್ವತಯಾರಿಗಳು ರಾಜ್ಯದಾದ್ಯಂತ ಉತ್ತಮವಾಗಿ ನಡೆಯುತ್ತಿದ್ದು, ಕಾರ್ಯಕ್ರಮದ ಯಶಸ್ಸಿಗೆ ಎಲ್ಲರ ಸಹಕಾರ ಅಗತ್ಯ' ಎಂದು ಅವರು ತಿಳಿಸಿದರು. ಕಮ್ಮಟದ ಸಂಚಾಲಕ ಜಿ. ಸುಬ್ರಹ್ಮಣ್ಯ ಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದಾದ್ಯಂತ ಭಜನಾ ಪರಿಷತ್ ಮೂಲಕ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಭಜನಾ ತರಬೇತಿಗಳು ಯಶಸ್ವಿಯಾಗಿ ನಡೆಯುತ್ತಿವೆ.

ಈಗಾಗಲೇ ರಾಜ್ಯ ಭಜನಾ ಪರಿಷತ್ ಪದಾಧಿಕಾರಿಗಳ ಸಭೆ ನಡೆಸಲಾಗಿದೆ ಎಂದರು. ಕಮ್ಮಟದ ವಸತಿ ವ್ಯವಸ್ಥೆ, ಉದ್ಘಾಟನಾ ಸಮಾರಂಭ, ನಗರ ಭಜನೆ, ಸಾಧಕ ಭಜನಾ ಮಂಡಳಿಗಳ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅಕ್ಟೋಬರ್ 4ರಂದು ನಡೆಯಲಿರುವ ಭಜನೋತ್ಸವ ಮತ್ತು ಸಮಾರೋಪ ಸಮಾರಂಭದ ಸಿದ್ಧತೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ವಿವಿಧ ಜವಾಬ್ದಾರಿಗಳ ನಿರ್ವಹಣೆಗೆ ಪೂರಕ ಸಮಿತಿಗಳನ್ನು ರಚಿಸಲಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಒತ್ತಡವನ್ನು ನೀವು ತೊಡೆದುಹಾಕಬಹುದು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

**ವೃಷಭ** ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ಮಕ್ಕಳು ನೀವು ಅವರೆಡೆಗೆ ಗಮನ ಹರಿಸಬೇಕೆಂಬ ಬೇಡಿಕೆಯಿಟ್ಟರೂ ಅವರು ನಿಮಗೆ ಸಂತೋಷ ತರುತ್ತಾರೆ.

**ಮಿಥುನ** ನೀವು ಸಣ್ಣ ವಿಷಯಗಳಿಗೂ ಕಿರಿಕಿರಿಗೊಳ್ಳುತ್ತೀರಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರಿಂದ ಬೆಂಬಲ ಪಡೆದು ಹೊಸ ಉತ್ಸಾಹ ಆತ್ಮವಿಶ್ವಾಸದಿಂದ ಮುಂದುವರಿಯುತ್ತೀರಿ.

**ಕಟಕ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ಸ್ನೇಹಿತರು ಮತ್ತು ಸಂಬಂಧಿಗಳೊಡನೆ ಆನಂದಿಸಿ. ನ್ಯಾಯಯುತವಾದ ಉದಾರ ಪ್ರೀತಿಯಿಂದ ಪುರಸ್ಕೃತಗೊಳ್ಳುವ ಸಾಧ್ಯತೆಯಿದೆ.

**ಸಿಂಹ** ನಿಮ್ಮ ಅಸಭ್ಯ ವರ್ತನೆ ನಿಮ್ಮ ಹೆಂಡತಿಯ ಮನಸ್ಸನ್ನು ಹಾಳು ಮಾಡುತ್ತದೆ. ನೀವು ಯಾರನ್ನಾದರೂ ಅಗೌರವದಿಂದ ಕಾಣುವುದು ಹಾಗೂ ಸಂಬಂಧವನ್ನು ಲಘುವಾಗಿ ತೆಗೆದುಕೊಳ್ಳುವುದು ಅಪಾಯಕ್ಕೆ ಅದನ್ನು ತೀವ್ರವಾಗಿ ಘಾಸಿಗೊಳಿಸಬಹುದು ಎಂದು ಅರ್ಥ ಮಾಡಿಕೊಳ್ಳಬೇಕು.

**ಕನ್ಯಾ** ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂಜರಿಯದಿರಿ. ಆತ್ಮವಿಶ್ವಾಸದ ನಿಮ್ಮನ್ನು ಆವರಿಸಲು ಬಿಡಬೇಡಿ, ಏಕೆಂದರೆ ಅದು ಕೇವಲ ನಿಮ್ಮ ಸಮಸ್ಯೆಯನ್ನು ಮಾತ್ರ ಸಂಕೀರ್ಣಗೊಳಿಸುತ್ತದೆ ಮತ್ತು ನಿಮ್ಮ ಪ್ರಗತಿಯನ್ನು ಹಾಳುಗೆಡವಬಲ್ಲದು. ನಿಮ್ಮ ಆತ್ಮವಿಶ್ವಾಸವನ್ನು ಮರಳಿ ಪಡೆಯಲು ನಿಮ್ಮನ್ನು ವ್ಯಕ್ತಪಡಿಸಿ .

**ತುಲಾ** ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ. ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ. ಪ್ರಣಯದ ಅವಕಾಶಗಳಿವೆ ಆದರೆ ಅವು ಕ್ಷಣಿಕವಾಗಿರುತ್ತವೆ.

**ವೃಶ್ಚಿಕ** ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರೆಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು. ಎಲ್ಲಾದರೂ ಹೂಡಿಕೆ ಮಾಡಿರುವ ಜನರು, ಇಂದಿನ ದಿನ ಅವರಿಗೆ ಆರ್ಥಿಕ ನಷ್ಟ ಸಂಭವಿಸಬಹುದು ಮಗುವಿನ ಅಧ್ಯಯನದ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

**ಧನಸ್ಸು** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಅನಿರೀಕ್ಷಿತ ಅತಿಥಿಗಳು ಸಂಜೆ ನಿಮ್ಮ ಮನೆಯಲ್ಲಿ ತುಂಬಿರುತ್ತಾರೆ. ಇಂದು ನೀವು ನಿಮ್ಮ ಅತ್ಯುತ್ತಮ ನಡವಳಿಕೆಯನ್ನು ಹೊಂದಿರಬೇಕು.

**ಮಕರ** ಮಾದಕವಸ್ತುವಿನ ಅವಲಂಬನೆ ಹೆಚ್ಚುವ ಸಾಧ್ಯತೆಗಳಿರುವುದರಿಂದ ಸ್ವಯಂ ಔಷಧೋಪಚಾರ ಮಾಡಬೇಡಿ. ಇಂವು ನಿಮಗೆ ನಿಮ್ಮ ಸಹೋದರ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ನೀವು ಕುಟುಂಬದ ಸದಸ್ಯರೊಂದಿಗೆ ಸಮಯ ಕಳೆಯದೇ ಹೋದರೆ ಮನೆಯಲ್ಲಿ ಸಮಸ್ಯೆಗಳನ್ನು ನಿರೀಕ್ಷಿಸಬಹುದು.

**ಕುಂಭ** ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ನಕ್ಷತ್ರಗಳ ಚಲನೆಯಿಂದ ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ಜೀವನದಲ್ಲಿ ಒಂದು ಭವ್ಯವಾದ ಲಯವನ್ನು ರೂಪಿಸಿಕೊಳ್ಳಿ.

**ಮೀನ** ಇತ್ತೀಚೆಗೆ ನಿಮ್ಮಲ್ಲಿ ಕೆಲವರು ಓವರ್‌ಟೈಮ್ ಮಾಡುತ್ತಿರುತ್ತಾರೆ ಹಾಗೂ ನಿಮ್ಮ ಚೈತನ್ಯ ಉಡುಗುತ್ತಿರುತ್ತದೆ– ಇಂದು ನೀವು ಒತ್ತಡ ಹಾಗೂ ಸಂದಿಗ್ಧತೆಯನ್ನು ಬಯಸುವುದಿಲ್ಲ, ಮನೆಯ ಅಗತ್ಯವಾದ ವಸ್ತುಗಾಲ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ.

# ಜಾನುವಾರುಗಳನ್ನು ಶಾಸಕ, ಸಚಿವರ ಮನೆ ಮುಂದೆ ಕಟ್ಟಿಹಾಕಿ ಪ್ರತಿಭಟನೆ

## ಜಿಲ್ಲೆಯಲ್ಲಿ ಮಳೆ ಪ್ರಮಾಣ ಪ್ರಸ್ತುತ ವರ್ಷ 41ರಷ್ಟು ಕಡಿಮೆಯಾಗಿದ್ದರು, ರೈತರು ಸುಮಾರು 98ರಷ್ಟು ಬಿತ್ತನೆ ಮಾಡಿದ್ದರು

• **ಉದಯವಾಹಿನಿ ಹಾವೇರಿ:**

ಜಿಲ್ಲೆಯಲ್ಲಿ ಬಹುತೇಕ ಕೆರೆಕಟ್ಟೆಗಳು ಖಾಲಿ ಖಾಲಿಯಾಗಿವೆ. ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದರೂ ನಂತರ ಆಗಮಿಸಿದ ಮುಂಗಾರು ಮಳೆ ಮುನಿಸಿಕೊಂಡಿತು. ಪರಿಣಾಮ ಜಿಲ್ಲೆಯಲ್ಲಿ ಕಾರಹುಣ್ಣಿಮೆ ವೇಳೆಗೆ ತುಂಬಿ ಹರಿಯಬೇಕಾಗಿದ್ದ ನದಿಗಳು ಜುಲೈ ತಿಂಗಳ ಕೊನೆಯ ದಿನಗಳಲ್ಲಿ ಹರಿಯಲಾರಂಭಿಸಿದವು. ಅದು ಮಲೆನಾಡಿನಲ್ಲಿ ಸುರಿದ ಮಳೆಗೆ ವರದಾ, ಕುಮದ್ವತಿ, ತುಂಗಭದ್ರಾ, ಧರ್ಮಾ ನದಿ ತುಂಬಿ ಹರಿದಿದವು. ಆದರೆ ಈ ನದಿಗಳಿಂದ ಏತನೀರಾವರಿ ಯೋಜನೆಗಳಿಗೆ ನೀರು ತುಂಬಿಸದ ಪರಿಣಾಮ ಜಿಲ್ಲೆಯ ಬಹುತೇಕ ಕೆರೆಗಳು ಖಾಲಿ ಖಾಲಿಯಾಗಿವೆ. ಇದರಿಂದ ಅಂತರ್ಜಲಮಟ್ಟ ಸಹ ಕುಸಿದಿದೆ.

1 : ಅಂತರ್ಜಲಮಟ್ಟ ಸಹ ಕುಸಿದಿದೆ
2 : ಹಾವೇರಿ ಜಿಲ್ಲೆಯಲ್ಲಿ ಹಸಿ ಬರಗಾಲ
3 : ಹಾವೇರಿ ಜಿಲ್ಲೆಯಲ್ಲಿ ಬರಗಾಲವಿದೆ

ಇದಲ್ಲದೇ ಬೆಳೆಗಳು ಸಹ ಒಣಗಲಾರಂಭಿಸಿದ್ದು, ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಕಳೆದ ಕೆಲ ದಿನಗಳಿಂದ ಮಳೆಯಾಗುತ್ತಿದ್ದರೂ ಸಹ ಭೂಮಿ ಸಹ ನೆನೆಯುತ್ತಿಲ್ಲ ಎನ್ನುತ್ತಿದ್ದಾರೆ ರೈತರು. ಇದರಿಂದ ಹಾವೇರಿ ಜಿಲ್ಲೆಯ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಮೊದಲ ಪಟ್ಟಿಯಲ್ಲಿ ಹಾವೇರಿ ಜಿಲ್ಲೆ ಬರಗಾಲ ಪೀಡಿತ ಎಂದು ಘೋಷಣೆಯಾಗಬೇಕಿತ್ತು.


ಉದಯವಾಹಿನಿ ಚಿತ್ರ

ಜಾನುವಾರುಗಳಿಗೆ ತಿನ್ನಲು ಮೇವಿಲ್ಲದ ದುಃಸ್ಥಿತಿ ತಲುಪಿವೆ. ಹಾವೇರಿ ಜಿಲ್ಲೆ ಬರಗಾಲ ಪೀಡಿತ ಎಂದು ಘೋಷಣೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಜಾನುವಾರುಗಳನ್ನು ಶಾಸಕ, ಸಚಿವರ ಮನೆ ಮುಂದೆ ಕಟ್ಟಿ ಪ್ರತಿಭಟನೆ ನಡೆಸುತ್ತೇವೆ ಎಂದರು.

ಆದರೆ, ಮುಂಗಾರು ಅಧಿವೇಶನದಲ್ಲಿಯಾದರು ಬರಗಾಲ ಪೀಡಿತ ಘೋಷಿಸಬೇಕಾಗಿತ್ತು. ಆದರೆ, ಕಲಾಪದ ವೇಳೆ ಅಪವ್ಯಯವಾಯಿತೇ ವಿನಃ ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಣೆ ಮಾಡಲಿಲ್ಲ ಎಂದು ರೈತರು ಬೇಸರ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಮಳೆ ಪ್ರಮಾಣ ಪ್ರಸ್ತುತ ವರ್ಷ 41ರಷ್ಟು ಕಡಿಮೆಯಾಗಿದ್ದರು, ರೈತರು ಸುಮಾರು 98ರಷ್ಟು ಬಿತ್ತನೆ ಮಾಡಿದ್ದರು. ರಾಜ್ಯದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಬಿತ್ತನೆ ಮಾಡಿದ್ದ ಜಿಲ್ಲೆ ಹಾವೇರಿಯಾಗಿತ್ತು.

ಬರಗಾಲ ಪೀಡಿತ ಜಿಲ್ಲೆ ಘೋಷಣೆ ಮಾಡದಿದ್ದರೆ, ಪಶುವೈದ್ಯರನ್ನು ನೇಮಕ ಮಾಡದಿದ್ದರೆ ನಮ್ಮ ಜಾನುವಾರುಗಳನ್ನು ಶಾಸಕ, ಸಚಿವರ ಮನೆ ಮುಂದೆ ಕಟ್ಟಿಹಾಕಿ ಪ್ರತಿಭಟನೆ ನಡೆಸುತ್ತೇವೆ ಎಂದು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಳ್ಳಾರಿ ಎಚ್ಚರಿಕೆ ನೀಡಿದ್ದಾರೆ.

ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದರಿಂದ ರೈತರು ಬಿತ್ತನೆ ಮಾಡಿದರು. ಆರಂಭದಲ್ಲಿ ಉತ್ತಮ ಮಳೆಯಾಗಿದ್ದರಿಂದ ಬೆಳೆಗಳು ಸಹ ಉತ್ತಮವಾಗಿ ಬೆಳೆದಿದ್ದವು. ಆದರೆ, ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಬರಲಿಲ್ಲ. ಇದರಿಂದ ಕೆಲ ರೈತರು ಬೆಳೆಗಳನ್ನು ಹಾಳು ಮಾಡಿ ಮರುಬಿತ್ತನೆ ಮಾಡಿದರು.

ಈ ರೀತಿ ಮರುಬಿತ್ತನೆ ಮಾಡಿದ ಬೆಳೆಗಳ ಪರಿಸ್ಥಿತಿ ಸಹ ಅದೇ ಆಗಿತ್ತು. ಮಳೆ ಕೈಕೊಟ್ಟ ಪರಿಣಾಮ ರೈತರ ಬೆಳೆಗಳು ಸಮರ್ಪಕವಾಗಿ ಬೆಳೆಯಲಿಲ್ಲ.

ರಾಜ್ಯದ ಹಲವೆಡೆ ಮಳೆಯೇ ಆಗಿಲ್ಲ, ನಮ್ಮಲ್ಲಿ ಹಸಿರು ಬರಗಾಲ ಇದೆ. ಬರಗಾಲ ಘೋಷಣೆ ಆಗಬೇಕು ಎಂದು ನಾವೂ ಒತ್ತಾಯ ಮಾಡಿದ್ದೇವೆ. ಆದರೆ ಬಿಜೆಪಿಯವರು ಅದರ ಬಗ್ಗೆ ಚರ್ಚೆ ಮಾಡಲು ಸದನದಲ್ಲಿ ಬಿಡುತ್ತಿಲ್ಲ. ಬರಗಾಲದ ಬಗ್ಗೆ ಜಿಲ್ಲಾಡಳಿತದಿಂದ ವರದಿ ಸಲ್ಲಿಕೆಯಾಗಿದೆ. **-ಸಚಿವ ರುದ್ರಪ್ಪ ಲಮಾಣಿ**

ಕೆಲವೊಂದು ಬೆಳೆಗಳಿಗೆ ರೋಗಗಳು ಸಹ ಕಾಣಿಸಿಕೊಂಡವು. ಮೆಕ್ಕೆಜೋಳಕ್ಕೆ ಲದ್ದಿಹುಳು ಕಾಟ, ಸೋಯಾಬೀನ್‌ಗೆ ಹಸಿರುಕೀಡೆ ಕಾಟ ಶೇಂಗಾಕ್ಕೆ ಎಲೆಸುರುಳಿ ರೋಗಗಳು ಕಾಣಿಸಿಕೊಂಡು ರೈತರ ಹಲವು ಪ್ರಯತ್ನಗಳು ವಿಫಲವಾದವು. ಈ ಮಧ್ಯೆ, ಹಾವೇರಿ ಜಿಲ್ಲೆ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಜಿಲ್ಲೆಯಲ್ಲಿ ಬರದ ಬಗ್ಗೆ ಪ್ರವಾಸ ಮಾಡಿದರು.

ಈ ಸಂದರ್ಭದಲ್ಲಿ ರೈತರು ಜಿಲ್ಲೆಯನ್ನು ಹಸಿ ಬರಗಾಲ ಪೀಡಿತ ಎಂದು ಘೋಷಿಸುವಂತೆ ಒತ್ತಾಯಿಸಿದರು. ದೂರದಿಂದ ನೋಡಿದರೆ ಬೆಳೆಗಳು ಹಚ್ಚಹಸಿರಾಗಿ ಕಾಣುತ್ತವೆ. ನೋಡಿದವರೆಗೆ ಕಣ್ಣುಕಾಣುವವರೆಗೆ ಹಚ್ಚಹಸಿರು ಕಾಣುತ್ತದೆ. ಆದರೆ, ಈ ಬೆಳೆಗಳು ನಿರೀಕ್ಷಿತ ಪ್ರಮಾಣದಲ್ಲಿ ಇಳುವರಿ ನೀಡುವುದಿಲ್ಲ. ಹಸಿರುಹೊತ್ತು ನಿಂತಿದ್ದರು. ಪ್ರತಿಶತಃ 40ರಷ್ಟು ಇಳುವರಿ ಬಂದರೆ ಬಹಳವಾಗಬಹುದು. ಮೆಕ್ಕೆಜೋಳ ತೆನೆ ಹೊತ್ತಿರುತ್ತದೆ. ಆದರೆ, ತೆನೆಯ ಗಾತ್ರ ಚಿಕ್ಕದಾಗಿರುತ್ತದೆ. ಅದೇ ರೀತಿ ಶೇಂಗಾ ಸೋಯಾಬಿನ್‌ಗಳಲ್ಲಿ ಸಹ ಇಳುವರಿ ಕುಸಿದಿದೆ.

# ಬರ ಘೋಷಣೆ ಮಾಡಿ, ಇಲ್ಲಾ ರೈತರಿಗೆ ವಿಷ ಕೊಡಿ: ಅಂದಪ್ಪ ಕೋಳೂರ

• **ಉದಯವಾಹಿನಿ ಕೊಪ್ಪಳ,**

ಕೊಪ್ಪಳ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಬರದ ಛಾಯೆ ಆವರಿಸಿದ್ದು, ಸರ್ಕಾರ ಕೂಡಲೇ ಬರ ಘೋಷಿಸಿ ರೈತರಿಗೆ ಪರಿಹಾರ ನೀಡಬೇಕು, ಇಲ್ಲದಿದ್ದರೆ ರೈತರಿಗೆ ವಿಷ ಕೊಡಲಿ ಎಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ರುದ್ರಪ್ಪ ಕೋಳೂರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಈಗಾಗಲೇ ಮುಖ್ಯಮಂತ್ರಿಗಳ ಆದೇಶದಂತೆ ಜಿಲ್ಲಾ ಉಸ್ತುವಾರಿ ಸಚಿವರು ರೈತರ ಜಮೀನಿಗೆ ಭೇಟಿ ನೀಡಿ ಬೆಳೆ ಸಮೀಕ್ಷೆ ನಡೆಸಿದ್ದರೂ, ಅಧಿವೇಶನದಲ್ಲಿ ಬರ ಘೋಷಣೆ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ. ಒಬ್ಬ ಸಚಿವರ ರಾಜೀನಾಮೆ ಬಗ್ಗೆಯೇ ಚರ್ಚೆ ನಡೆಯುತ್ತಿದೆಯೇ ಹೊರತು ರೈತರ ಸಂಕಷ್ಟದ ಬಗ್ಗೆ ಚರ್ಚೆಯಾಗುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕೊಪ್ಪಳ ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕದಲ್ಲಿ ಮುಂಗಾರು ಮಳೆ ಕೊರತೆಯಿಂದ 6.64 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬಿತ್ತನೆ ಮಾಡಿದ ಬೆಳೆಗಳು ಒಣಗಿ ನಾಶವಾಗಿವೆ. ಹೆಸರು, ತೊಗರಿ, ಶೇಂಗಾ, ಮೆಕ್ಕೆಜೋಳ,


ಉದಯವಾಹಿನಿ ಚಿತ್ರ

ಈರುಳ್ಳಿ, ಅಲಸಂದಿ, ಉದ್ದು, ಹತ್ತಿ ಬೆಳೆಗಳಿಗೆ ಹೆಚ್ಚಿನ ಹಾನಿಯಾಗಿದ್ದು, ರೈತರು ಆತಂಕದಲ್ಲಿದ್ದಾರೆ.

ಕಳೆದ ತಿಂಗಳು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ ಅವರು ರೈತರ ಜಮೀನಿಗೆ ಭೇಟಿ ನೀಡಿದ ವೇಳೆ 'ಬೆಳೆ ವಿಮೆ ತುಂಬಿದ್ದೀರಾ' ಎಂದು ಪ್ರಶ್ನಿಸಿದ್ದರು. ಬೆಳೆ ವಿಮೆ ಖಾಸಗಿ ಕಂಪನಿಗೆ ಸೇರಿದ್ದು, ಬರ ಪರಿಹಾರ ಸರ್ಕಾರಕ್ಕೆ ಸೇರಿದ್ದು. ಸರ್ಕಾರ ಮಾಡುವ ಕೆಲಸ ಸರ್ಕಾರ ಮಾಡಬೇಕು, ಕಂಪನಿ ಮಾಡುವ ಕೆಲಸ ಕಂಪನಿ ಮಾಡಬೇಕು. ಎರಡೂ ಜಂಟಿಯಾಗಿ ಕೆಲಸ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಅವರು ಆಗ್ರಹಿಸಿದರು.

**★ ರೈತರ ಬೇಡಿಕೆಗಳು ★**



- ಕೂಡಲೇ ಅಧಿವೇಶನದಲ್ಲಿ ಬರ ಘೋಷಿಸಿ ರೈತರಿಗೆ ಬರ ಪರಿಹಾರ ನೀಡಬೇಕು.
- 2 ಲಕ್ಷ ರೂ.ವರೆಗೆ ರೈತರ ಸಾಲ ಮನ್ನಾ ಮಾಡಬೇಕು.
- ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಬೆಳೆ ವಿಮೆ ತುಂಬಿದ ರೈತರ ಖಾತೆಗೆ ತಕ್ಷಣ ಹಣ ಜಮೆ ಮಾಡಬೇಕು.
- ಹಣವಿಲ್ಲದೆ ಬೆಳೆ ವಿಮೆ ತುಂಬದ ರೈತರಿಗೂ ಹೆಚ್ಚಿನ ಪರಿಹಾರ ನೀಡಬೇಕು.

ಈ ಸಂದರ್ಭದಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಅಣ್ಣಪ್ಪ ನೆರೆಗಲ್, ಕಳಕಪ್ಪ ಕ್ಯಾದಿಗುಂಪಿ, ಸವಿತಾ ಉಮೇಶ, ನಾಗರಡ್ಡಿ, ಬಸವರಾಜ ಹನಸಿ, ಮಾರುತಿ ಮರಡಿ, ಯಲ್ಲಪ್ಪ ಎಚ್. ಬಾಬರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಮುಳಗಡೆ ಸಂತ್ರಸ್ತರಿಗೆ ನಿವೇಶನ ಹಂಚಿಕೆಯಲ್ಲಿ ವಿಳಂಬ

# ರೈತ ಸಂಘದಿಂದ ಹೋರಾಟದ ಎಚ್ಚರಿಕೆ

• **ಉದಯವಾಹಿನಿ ಕೊಲ್ಹಾರ**

ವಿಜಯಪುರ ಜಿಲ್ಲೆಯ ಕೊಲ್ಹಾರ ಹಾಗೂ ಕೊಲ್ಹಾರ ತಾಲ್ಲೂಕು ವ್ಯಾಪ್ತಿಯ ಮುಳಗಡೆ ಸಂತ್ರಸ್ತರಿಗೆ ಸಮರ್ಪಕವಾಗಿ ನಿವೇಶನ ಹಂಚಿಕೆ ಮಾಡದೆ, ವಿವಿಧ ಕಾರಣಗಳನ್ನು ನೀಡಿ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಘಟಕದ ಅಧ್ಯಕ್ಷ ಸೋಮು ಬಿರಾದಾರ ಅವರು ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಕೊಲ್ಹಾರ ಗ್ರಾಮ ಕೃಷ್ಣಾ ನದಿ ಯೋಜನೆಯಡಿ ಮುಳಗಡೆಯಾಗಿದ್ದು, ದೊಡ್ಡ ಪಟ್ಟಣವಾಗಿ ಹಾಗೂ ತಾಲ್ಲೂಕು ಕೇಂದ್ರವಾಗಿ ಅಭಿವೃದ್ಧಿ ಹೊಂದಿದ್ದರೂ, ಮುಳಗಡೆ ಸಂತ್ರಸ್ತರಿಗೆ ಇನ್ನೂ ಸಮರ್ಪಕ ಮೂಲಸೌಕರ್ಯ ಹಾಗೂ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು ಲಭ್ಯವಾಗಿಲ್ಲ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಸಾವಿರಾರು ರೈತರು ಮನೆ-ಮಠ ಹಾಗೂ ಫಲವತ್ತಾದ ಕೃಷಿ ಭೂಮಿಯನ್ನು ಕಳೆದುಕೊಂಡಿದ್ದು, ಸಂತ್ರಸ್ತರಿಗೆ ದೊರೆಯಬೇಕಾದ ಪರಿಹಾರದಲ್ಲಿಯೂ ವ್ಯತ್ಯಾಸವಾಗಿದೆ. ಬಾಗಲಕೋಟೆ ಜಿಲ್ಲೆಯ ಮುಳಗಡೆ ಸಂತ್ರಸ್ತರಿಗೆ ನೀಡಿರುವ ರೀತಿಯ ಪ್ರಾತಿನಿಧ್ಯ ಮತ್ತು ಸೌಲಭ್ಯಗಳು ಕೊಲ್ಹಾರ ಸಂತ್ರಸ್ತರಿಗೆ ದೊರೆತಿಲ್ಲ ಎಂದು ಸಂಘಟನೆ ಅಸಮಾಧಾನ ವ್ಯಕ್ತಪಡಿಸಿದೆ. ಕೊಲ್ಹಾರ ಪಟ್ಟಣಕ್ಕೆ ಸಂಬಂಧಿಸಿದ 1,117 ನಿವೇಶನಗಳ ಕುರಿತು ಸಿಐಡಿ ಪ್ರಕರಣ ದಾಖಲಾಗಿರುವುದನ್ನು ಹೊರತುಪಡಿಸಿ, ಉಳಿದ ನಿವೇಶನಗಳ ವಿಚಾರದಲ್ಲಿಯೂ ತನಿಖಾ ತಂಡ ರಚಿಸಿ, ಸಂತ್ರಸ್ತರಿಗೆ ನಿವೇಶನ ರದ್ದುಪಡಿಸುವುದಾಗಿ ನೋಟಿಸ್ ನೀಡಲಾಗುತ್ತಿದೆ.

ಇದರಿಂದ ಈಗಾಗಲೇ ಸಂಕಷ್ಟದಲ್ಲಿರುವ ಸಂತ್ರಸ್ತರಿಗೆ ಮತ್ತಷ್ಟು ತೊಂದರೆಯಾಗುತ್ತಿದೆ ಎಂದು ದೂರಲಾಗಿದೆ. ಆದ್ದರಿಂದ ನಿವೇಶನಗಳ ಸಮಸ್ಯೆಯನ್ನು ಕೂಡಲೇ ಪರಿಶೀಲಿಸಿ, ಅರ್ಹ ಮುಳಗಡೆ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಬೇಕು. ಅಲ್ಲದೆ ಕೊಲ್ಹಾರ ಪಟ್ಟಣ ಪಂಚಾಯಿತಿಯಲ್ಲಿ ನಿವೇಶನಗಳಿಗೆ ಸಂಬಂಧಿಸಿದ ಉತಾರೆಗಳನ್ನು ಸಮರ್ಪಕವಾಗಿ ನೀಡುತ್ತಿಲ್ಲ ಎಂಬ ದೂರುಗಳಿದ್ದು, ಅರ್ಹ ಫಲಾನುಭವಿಗಳಿಗೆ ಉತಾರೆ ದೊರೆಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಸೆ.16ರೊಳಗೆ ಅಧಿಕಾರಿಗಳು ಸಂತ್ರಸ್ತರೊಂದಿಗೆ ಸಭೆ ನಡೆಸಿ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ಸೆ.16ರಂದು ಬೆಳಿಗ್ಗೆ 10.30ಕ್ಕೆ ಪಟ್ಟಣ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಮಧ್ಯಾಹ್ನ 12 ಗಂಟೆಯ ನಂತರ ಪಟ್ಟಣ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕುವುದರ ಜೊತೆಗೆ ಎನ್‌ಎಚ್-218 ರಸ್ತೆ ಬಂದ್ ಮಾಡಿ ಉಗ್ರ ಹೋರಾಟ ನಡೆಸಲಾಗುವುದು ಎಂದು ರೈತ ಸಂಘ ಎಚ್ಚರಿಕೆ ನೀಡಿದೆ. ಈ ಹೋರಾಟಕ್ಕೆ ಶಶಿಕಾಂತ ಗುರುಜಿ ಹಾಗೂ ಚೂನ್ನಪ್ಪ ಪೂಜಾರಿ ನೇತೃತ್ವ ವಹಿಸಲಿದ್ದಾರೆ ಎಂದು ಸಂಘಟನೆ ತಿಳಿಸಿದೆ.

# 70ರ ದಶಕದಲ್ಲಿ ಸಮೃದ್ಧವಾಗಿತ್ತು ಹುಲಿ ಸಂತತಿ: ಕಿಷ್ಕಿಂದೆಯಲ್ಲಿದೆ ವ್ಯಾಘ್ರ ಬೇಟೆಯ ಐತಿಹ್ಯ

• **ಉದಯವಾಹಿನಿ ಕೊಪ್ಪಳ:**

ಗಂಗಾವತಿ ತಾಲ್ಲೂಕಿನ ತೆಂಬಾ ಅರಣ್ಯ ಪ್ರದೇಶದಲ್ಲಿ ಹಲವು ದಿನಗಳಿಂದ ಸಂಚರಿಸುತ್ತ ಸುತ್ತಲಿನ ಜನರಲ್ಲಿ ಆತಂಕ ಮೂಡಿಸಿರುವ ಕಾಡಿನ ರಾಜ 'ಹುಲಿ' ಈಗ ಜಿಲ್ಲೆಯ ಜನರ ಕುತೂಹಲ ಕೆರಳಿಸಿದ್ದಾನೆ. ಆದರೆ ಐತಿಹಾಸಿಕ ದಾಖಲೆಗಳು ಮತ್ತು ಜಿಲ್ಲಾ ದಾಖಲೆಗಳು ಕೊಪ್ಪಳ ಮತ್ತು ಬಳ್ಳಾರಿ ಕಾಡುಗಳಲ್ಲಿ ಹುಲಿಗಳು ಮತ್ತು ಇತರ ಮಾಂಸಾಹಾರಿಗಳ ಪ್ರಾಣಿಗಳು ಸಮೃದ್ಧವಾಗಿ ಓಡಾಡಿಕೊಂಡಿದ್ದವು ಎಂಬುದನ್ನು ಸಾಬೀತುಪಡಿಸುತ್ತವೆ.

1950 ರ ದಶಕದ ಅಂತ್ಯದಲ್ಲಿ, ತುಂಗಭದ್ರಾ ಅಣೆಕಟ್ಟು ನಿರ್ಮಾಣದ ನಂತರ, ಶ್ರೀಶೈಲಂ ಮತ್ತು ಶಿವಮೊಗ್ಗವನ್ನು ಸಂಪರ್ಕಿಸುವ ಪೂರ್ವ ಕಾರಿಡಾರ್‌ನಿಂದ ಪಶ್ಚಿಮ ಕಾರಿಡಾರ್ ನಡುವೆ ಇದ್ದ ಹುಲಿ ಸಂಪರ್ಕ ಕಡಿತಗೊಂಡಿತು. ಮುಂದಿನ ಎರಡು ದಶಕಗಳವರೆಗೆ ಕೊಪ್ಪಳ ಮತ್ತು ಸಂಡೂರಿನಲ್ಲಿ ಹುಲಿಗಳ ಸಂಖ್ಯೆಯು ಸಣ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದುತ್ತಲೇ ಇತ್ತು.

ಈ ಹುಲಿಗಳನ್ನು ರಾಜಮನೆತನದ ಸದಸ್ಯರು ಬೇಟೆಯಾಡುವ ಕಾರ್ಯಕ್ರಮಗಳಲ್ಲಿ ಸ್ಥಳೀಯ ಬೇಟೆಗಾರರಿಂದ ಬೇಟೆಯಾಡಿಸುತ್ತಿದ್ದರು. 1972 ರಲ್ಲಿ ವನ್ಯಜೀವಿ ಸಂರಕ್ಷಣಾ ಕಾನೂನು ಜಾರಿಗೆ ಬಂದ ನಂತರ, ಈ ಪ್ರದೇಶಗಳಲ್ಲಿ ಅಂತಹ ಯಾವುದೇ ಬೇಟೆ ವರದಿಯಾಗಿಲ್ಲ. ಈ ಪ್ರದೇಶದ ಕೊನೆಯ ಹುಲಿಯನ್ನು ಕೊಪ್ಪಳದ ಸನಾಪುರ ಬಳಿಯ ಎಲುಗುಡ್ಡ ಪ್ರದೇಶದಲ್ಲಿ ಬೇಟೆಯಾಡುವ ಸಮಯದಲ್ಲಿ ಗುಂಡು ಹಾರಿಸಿ ಕೊಲ್ಲಲಾಯಿತು. ಇಂದಿನ ತುಂಗಭದ್ರಾ ಅಣೆಕಟ್ಟು ಇರುವ ಹೆಸರಾರು ಗ್ರಾಮದ ಸಮತಟ್ಟಾದ ಸವನ್ನಾ ಕೊಪ್ಪಳದ ಡೆಕ್ಕನ್ ಕನ್ಸರ್ವೇಶನ್ ಫೌಂಡೇಶನ್‌ನ ಸಂಸ್ಥಾಪಕ ಮತ್ತು ಗಜೇಂದ್ರಘಡ ಮತ್ತು ಸಂಡೂರಿನ ಘೋರ್ಪಡೆ ಕುಲದ ಸದಸ್ಯ ಇಂದ್ರಜಿತ್ ಘೋರ್ಪಡೆ, ಬೇಟೆಯಾಡಿದ ದಿನಗಳನ್ನು ನೆನಪಿಸಿಕೊಂಡಿದ್ದಾರೆ, ಇತರ ಪ್ರಾಂತ್ಯಗಳಿಂದ ರಾಜಮನೆತನದ ಅತಿಥಿಗಳು ಬೇಟೆಯಾಡಲು ಸಂಡೂರು ಗಂಗಾವತಿಗೆ ಭೇಟಿ ನೀಡುತ್ತಿದ್ದರು ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

# ಸಮಾಜದ ಕಟ್ಟಕಡೆಯ ಸಾಮಾನ್ಯ ವ್ಯಕ್ತಿಗೂ ಕಾನೂನಿನ ಅರಿವು ಬೇಕು ಎಚ್ ಎಚ್ ಹಿರೇಮನಿ

• **ಉದಯವಾಹಿನಿ ಯಲಬುರ್ಗಾ:**

ಎಲ್ಲರೂ ಸಮನಾಗಿ ಆತ್ಮಗೌರವದಿಂದ ಬದುಕು ನಡೆಸಲು ಸಂವಿದಾನ ಎಲ್ಲರಿಗೂ ಅವಕಾಶ ನೀಡಿದೆ. ಸಮಾಜದ ಕಟ್ಟಕಡೆಯ ಸಾಮಾನ್ಯ ವ್ಯಕ್ತಿಗೂ ಕಾನೂನಿನ ಅರಿವಿರಬೇಕೆಂದು ಮುಖ್ಯ ಅತಿಥಿಗಳಾಗಿ ಹಿರಿಯ ವಕೀಲರಾದ ಎಚ್ ಎಚ್ ಹಿರೇಮನಿ ಅವರು ಕಾನೂನಿನ ಬಗ್ಗೆ ಸಲಹೆ ನೀಡಿದರು.

ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘದ ಯಲಬುರ್ಗಾ ಸಹಯೋಗದಲ್ಲಿ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮಂಗಳವಾರ ವಿದ್ಯಾರ್ಥಿಗಳಿಗೆ ಕಾನೂನು ಅರಿವು?ನೆರವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.'' ಮೂಲಭೂತ ಹಕ್ಕುಗಳಲ್ಲಿ ಮಕ್ಕಳ ಶಾಲೆಗೆ ಹೋಗಿ ಅಕ್ಷರ ಜ್ಞಾನ ಪಡೆಯುವುದು ಪ್ರತಿಯೊಬ್ಬ ಮಗುವಿನ ಹಕ್ಕು, ಇದನ್ನು ರಕ್ಷಣೆ ಮಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಎಚ್ ಎ ನದಾಫ್ ಜಂಟಿ ಕಾರ್ಯದರ್ಶಿಗಳು ತಾಲ್ಲೂಕು ವಕೀಲರ ಸಂಘ ಯಲಬುರ್ಗಾ ಅವರು ಮಾತನಾಡಿ, ಕಾನೂನಿನ ಅರಿವು ಇಂದು ಎಲ್ಲರಿಗೂ ಅಗತ್ಯ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಕಾನೂನು ಅರಿವು ಹೊಂದಿದ್ದಲ್ಲಿ ಕಾನೂನಾತ್ಮಕವಾಗಿ ಉಂಟಾಗುವ ಅನೇಕ ಸಮಸ್ಯೆಗಳು, ತೊಡಕುಗಳು ಇಲ್ಲವಾಗುತ್ತವೆ. ಕಾನೂನಿನ ತಿಳಿವಳಿಕೆ ಮನುಷ್ಯ ಜಾಗೃತಗೊಳಿಸಿ ಅಪರಾಧ ಮಾಡದಂತೆ ಎಚ್ಚರಿಸುತ್ತದೆ.


ಉದಯವಾಹಿನಿ ಚಿತ್ರ

ಗ್ರಾಮೀಣ ಪ್ರದೇಶಗಳು ಮಾತ್ರವಲ್ಲ ನಗರ ಪ್ರದೇಶಗಳಲ್ಲಿಯೂ ಕಾನೂನು ತಿಳಿವಳಿಕೆ ಕೊರತೆ ಎದ್ದು ಕಾಣುತ್ತಿದೆ. ಗ್ರಾಮೀಣ ಪ್ರದೇಶದ ಜನರು, ಅದರಲ್ಲೂ ಮಹಿಳೆಯರು, ವೃದ್ದರು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅವಕಾಶಗಳಿಂದ ವಂಚಿತರಾಗಿ ಕಟ್ಟಕಡೆಯಲ್ಲಿ ಬದುಕುತ್ತಿರುವ ಜನರನ್ನು ಮೇಲೆತ್ತಲು ಕಾನೂನು ಅವಶ್ಯಕತೆ ಇದೆ ಎಂದು ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು.

ಕೆ ಆರ್ ಬೆಟಗೇರಿ ವಕೀಲರು ಮತ್ತು ಸುರೇಶ ಎಸ್ ಎಚ್ ವಕೀಲರು ಮಾತನಾಡಿ ಮಹಿಳೆಯರ ಮೇಲೆ ಆಗುವ ದೌರ್ಜನ್ಯಗಳನ್ನು ತಡೆಗಟ್ಟಬೇಕು. ಜತೆಗೆ ಮೊಬೈಲ್ ಬಳಕೆಯಿಂದ ಕಳೆದ ಸುಮಾರು ದಿನಗಳಿಂದ ಸಾಕಷ್ಟು ಅನಾಹುತಗಳು ಉಂಟಾಗುತ್ತಿವೆ. ಆದ್ದರಿಂದ ವಿದ್ಯಾರ್ಥಿಗಳು ಮೊಬೈಲ್ ಬಳಕೆಯಿಂದ ದೂರ ಇರಬೇಕು ಎಂದರು ಮತ್ತು ಶಿಕ್ಷಕರು ಹೇಳಿದ ಪಾಠ ದಿಂದ ಕಲಿತು ಮುಂದಿನ ದಿನಗಳಲ್ಲಿ ಉನ್ನತ ಉದ್ದೇಯನ್ನ ಏರಬೇಕು ಎಂದು ಸಲಹೆ ನೀಡಿದರು.

ಮುಖ್ಯೋಪಾಧ್ಯಾಯ ರಾಮಪ್ಪ ಕಾಡದ ಮಾತನಾಡಿ ವಿದ್ಯಾರ್ಥಿಗಳು ಉನ್ನತ ಹಂತದಲ್ಲಿರುವವರನ್ನು ಗಮನಿಸಿ ಅನುಕರಣೆ ಮಾಡಬೇಕು. ನಮ್ಮ ಅಭಿವೃದ್ಧಿ ನಮ್ಮ ಕೈಯಲ್ಲೇ ಇದೆ ಎಂಬುದನ್ನು ಮರೆಯಬಾರದು ಎಂದರು.

ಕಾರ್ಯಕ್ರಮ ದಲ್ಲಿ ಅಧ್ಯಕ್ಷ ತೆ ವಹಿಸಿ ಎಸ್ ಡಿ ಎಮ್ ಸಿ ಉಪಾಧ್ಯಕ್ಷರು ಅಕ್ಕಮಹಾದೇವಿ ಕಲ್ಲೇಶ್ ವರ್ದಾನ್ ಕೊಪ್ಪಳ ಅವರು ಕಾರ್ಯಕ್ರಮದ ಘನಉಪಸ್ಥಿತಿ ವಹಿಸಿದರು. ಸಹ ಶಿಕ್ಷಕರು ಜಗದೀಶ್ ಬಳಿಗಾರ್ ಅವರು ನಿರೂಪಿಸಿದರು. ಈ ಸಂದರ್ಭ ಸರಕಾರಿ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರು ಆನಂದ್ ನಿಡಗುಂದಿ. ರಾಚಪ್ಪ ಅಂಗಡಿ. ಹಾಗೂ ಇನ್ನೊರ್ವ ಶಿಕ್ಷಕರು ಕೊಟ್ರೇಶ್. ಇನ್ನೂ ಶಿಕ್ಷಕರು ಸಿಬ್ಬಂದಿ ವರ್ಗದವರು ಪ್ರೌಢಶಾಲೆಯ ಬಾಲಕಿಯರು ಮತ್ತು ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಇನ್ನೂ ಉಪಸ್ಥಿತರಿದ್ದರು.

# ಭೂತನಾಳ ಕೆರೆಯಲ್ಲಿ ಆರು ಮೃತದೇಹಗಳು ಪತ್ತೆ

• **ಉದಯವಾಹಿನಿ ವಿಜಯಪುರ:**

ವಿಜಯಪುರ ನಗರದ ಐತಿಹಾಸಿಕ ಭೂತನಾಳ ಕೆರೆಯಲ್ಲಿ ಇಂದು ಬುಧವಾರ ಬೆಳಗ್ಗೆ ನಾಲ್ವರು ಮಹಿಳೆಯರು ಹಾಗೂ ಇಬ್ಬರು ಮಕ್ಕಳು ಸೇರಿ ಒಟ್ಟು ಆರು ಮೃತದೇಹಗಳು ತೇಲುತ್ತಿರುವುದು ಪತ್ತೆಯಾಗಿದೆ.

ಬೆಳಿಗಿನ ಜಾವ ವಾಯುವಿಹಾರಕ್ಕೆ ಬಂದವರು ಕೆರೆಯ ದಂಡೆಯ ಬಳಿ ಮೃತದೇಹಗಳನ್ನು ಕಂಡು ತಕ್ಷಣವೇ ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಮೃತಪಟ್ಟವರಲ್ಲಿ ನಾಲ್ವರು ಮಹಿಳೆಯರು ಮತ್ತು ಇಬ್ಬರು ಬಾಲಕರ ಮೃತದೇಹಗಳಾಗಿವೆ.

ಅವರ ಗುರುತು ಹಾಗೂ ವಾಸಸ್ಥಳದ ವಿವರಗಳು ಇನ್ನೂ ತಿಳಿದುಬಂದಿಲ್ಲ. ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ, ಆದರ್ಶ ನಗರ ಪೊಲೀಸ್ ಠಾಣೆಯ ಸಿಬ್ಬಂದಿ ಹಾಗೂ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಸಾವಿಗೆ ನಿಖರವಾದ ಕಾರಣವನ್ನು ಪೊಲೀಸರು ಇನ್ನೂ ದೃಢಪಡಿಸಿಲ್ಲ, ಸಂತ್ರಸ್ತರು ಆಕಸ್ಮಿಕವಾಗಿ ನೀರಿಗೆ ಬಿದ್ದು ಮೃತಪಟ್ಟಿರಬಹುದು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲು ಯೋಜಿಸಲಾಗಿದ್ದು, ಮೃತರ ಗುರುತು ಪತ್ತೆಹಚ್ಚಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಸ್ಥಳಕ್ಕೆ ನಗರದ ಡಿವೈಎಸ್ಪಿ ನಾಗರಾಜ್, ಆದರ್ಶ ನಗರ ಠಾಣೆ ಪಿಎಸ್ಐ ಸೀತಾರಾಮ ಲಮಾಣಿ ಹಾಗೂ ಸಿಬ್ಬಂದಿ ಮತ್ತು ಅಗ್ನಿಶಾಮಕ ದಳದವರು ಭೇಟಿ ನೀಡಿ, ಶವಗಳನ್ನು ಕೆರೆಯಿಂದ ಹೊರ ತೆಗೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಕಾರವಾರದಲ್ಲಿ ಪ್ಯಾಲೆಸ್ತೀನ್ ಬಾವುಟ ಪ್ರದರ್ಶನ!

• **ಉದಯವಾಹಿನಿ ಚಿಕ್ಕಮಗಳೂರು:**


ಉದಯವಾಹಿನಿ ಚಿತ್ರ

ಈದ್ ಮಿಲಾದ್ ಮೆರವಣಿಗೆ ಹಿನ್ನೆಲೆ ಚಿಕ್ಕಮಗಳೂರಿನ ಟಿಪ್ಪು ನಗರದಲ್ಲಿ ಐ ಲವ್ ಮೊಹಮ್ಮದ್ ಬ್ಯಾನರ್ ಅಳವಡಿಕೆ ಮಾಡಲಾಗಿದ್ದು ಇದು ವಿವಾದದ ಕಿಡಿ ಹೊತ್ತಿಸಿದೆ. ಕಳೆದ ವರ್ಷ ಈದ್ ಮಿಲಾದ್ ವೇಳೆ ಉತ್ತರ ಪ್ರದೇಶದ ಕಾನ್ಪುರದಿಂದ ಪ್ರಾರಂಭವಾಗಿದ್ದ ಈ ರೀತಿಯ ಬ್ಯಾನರ್ ವಿವಾದ, ಕರ್ನಾಟಕ ಸೇರಿ ದೇಶಾದ್ಯಂತ ಸದ್ದು ಮಾಡಿತ್ತು. ಅದೇ ಬ್ಯಾನರ್ ಈಗ ಚಿಕ್ಕಮಗಳೂರಿನಲ್ಲಿ ಮತ್ತೆ ಕಾಣಿಸಿಕೊಂಡಿದೆ. ಮತ್ತೊಂದೆಡೆ, ಉತ್ತರ ಕನ್ನಡದ ಅಂಕೋಲಾ ಪಟ್ಟಣದಲ್ಲಿ ಈದ್ ಮಿಲಾದ್ ಮೆರವಣಿಗೆ ವೇಳೆ ಕೆಲವರು ಪ್ಯಾಲೆಸ್ತೀನ್ ಧ್ವಜವನ್ನು ಪ್ರದರ್ಶಿಸಿದ್ದಾರೆ. ಇದನ್ನು ನೋಡಿದ ತಕ್ಷಣ ಪೊಲೀಸರು ಕಾರ್ಯಪ್ರವೃತ್ತರಾಗಿದ್ದು ಸ್ಥಳದಲ್ಲೇ ಧ್ವಜವನ್ನು ವಶಕ್ಕೆ ಪಡೆದು ಮುನ್ನೆಚ್ಚರಿಕೆ ನೀಡಿದ್ದಾರೆ. ಪ್ಯಾಲೆಸ್ತೀನ್ ಧ್ವಜವನ್ನು ಹಾರಿಸದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿ ಮೆರವಣಿಗೆಗೆ ಶಾಂತಿಯುತವಾಗಿ ಮುಂದುವರಿಯಲು ಅವಕಾಶ ಮಾಡಿಕೊಟ್ಟರು.

# ದಾನದಲ್ಲಿ ಶ್ರೇಷ್ಠದಾನ ನೇತ್ರದಾನ: ಡಾ.ಕವಿತಾ ಪಾಟೀಲ

• **ಉದಯವಾಹಿನಿ ಕಲಬುರಗಿ,**

ದಾನದಲ್ಲಿ ಶ್ರೇಷ್ಠವಾದ ದಾನ ನೇತ್ರದಾನ ಎಂದು ಜಿಮ್ಸ್ ಆಸ್ಪತ್ರೆಯ ನೇತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ.ಕವಿತಾ ಪಾಟೀಲ ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಹಾಗೂ ಜಿಮ್ಸ್ ಜಿಲ್ಲಾ ಆಸ್ಪತ್ರೆ ನೇತ್ರಾ ವಿಭಾಗದ ಸಹಯೋಗದಲ್ಲಿ ಜಿಮ್ಸ್ ಆಸ್ಪತ್ರೆಯ ಓಪಿಡಿ ವಿಭಾಗದ ಆವರಣದಲ್ಲಿ ಹಮ್ಮಿಕೊಂಡಿದ್ದ 41ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಏನಾದರು ಒಳ್ಳೆಯ ಕಾರ್ಯ ಮಾಡಬೇಕೆಂದರೆ ಅದು ನೇತ್ರದಾನ ಮಾತ್ರ. ಹುಟ್ಟುತ್ತ ಕುರುಡುತನದಲ್ಲಿ ಬೆಳೆದಿರುವವರ ಬಾಳಲ್ಲಿ ಬೆಳಕು ಆಗಬೇಕಾದರೆ ಮರಣದ ನಂತರ ನೇತ್ರಾದಾನ ಮಾಡುವುದರಿಂದ ಅಂಧತ್ವ ನಿವಾರಣೆ ಆಗುತ್ತದೆ. ಬದುಕು ಸಾರ್ಥಕವಾಗಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಮತ್ತು ಜಿಲ್ಲಾ ಅಂಧತ್ವ ಕಾರ್ಯಕ್ರಮ ಅಧಿಕಾರಿ ಡಾ.ರವಿಕಾಂತಿ ಕ್ಯಾತನಾಳ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ದಾನದಲ್ಲಿ ಶ್ರೇಷ್ಠ ದಾನ ನೇತ್ರದಾನದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ದೃಷ್ಟಿಗಾಗಿ ರೋಲ್ ಪ್ಲೇ ಮತ್ತು ಜನ ಜಾಗೃತಿ ಪೋಸ್ಟರ್ ಪ್ರದರ್ಶಿಸಲಾಯಿತು.

# ಹಬ್ಬದ ಸೀಸನ್‌ಗೆ ಬೆಲೆ ಏರಿಕೆ ಬಿಸಿ: ಸಿಹಿಯಾಗದ ಸಕ್ಕರೆ


## ಕಳೆದ 5 ವರ್ಷಗಳಲ್ಲೇ ಗರಿಷ್ಠ ಮಟ್ಟಕ್ಕೆ ದರ ಏರಿಕೆಯಿಂದ ಜನ ಸಾಮಾನ್ಯರ ಜೇಬಿಗೆ ಹೆಚ್ಚಿದ ಹೊರೆ!

• **ಉದಯವಾಹಿನಿ ಮಂಗಳೂರು:**

ಆಷಾಢ ಕಳೆದು ಶ್ರಾವಣ ಆಗಮಿಸುತ್ತಿದ್ದಂತೆ ಹಬ್ಬ, ಉತ್ಸವಗಳು

1 : ಕಬ್ಬು ಬೆಳೆಗೂ ಹೊಡೆತ
2 : ತರಕಾರಿ ದರಗಳು ಏರಿಕೆ
3 : ದರ ಜನರ ಜೇಬಿಗೆ ಕತ್ತರಿ

ಒಂದರ ಹಿಂದೆ ಒಂದರಂತೆ ಆಗಮಿಸುತ್ತಿವೆ. ಆದರೆ ಈ ಬಾರಿ ರಾಜ್ಯಾದ್ಯಂತ ಮಳೆ ಕೈಕೊಟ್ಟ (ಎಲ್ ನಿನೋ) ಕಾರಣ ಬೆಳೆಗಳ ಪ್ರಮಾಣ ಶೇ.50ರಷ್ಟು ಇಳಿಕೆಯಾಗಿದೆ. ಇದು ಹಬ್ಬದ ಉತ್ಸವದ ಮೇಲೆ ಕರಿಛಾಯೆ ಮೂಡಿಸಿದ್ದು, ಅಕ್ಕಿ, ಸಕ್ಕರೆ, ಬೆಲ್ಲ, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ದರ ನಾಗಾಲೋಟದಲ್ಲಿ ಸಾಗುತ್ತಿದೆ. ಏಪ್ರಿಲ್- ಮೇ ತಿಂಗಳಿನಲ್ಲಿ 50-55ರ ಆಸುಪಾಸಿನಲ್ಲಿದ್ದ ಅಕ್ಕಿ ಇದೀಗ 65-70ರ ದರದಲ್ಲಿ ಸಾಗುತ್ತಿದೆ. ಮುಂಗಾರು ಕೊರತೆಯಿಂದ ಭತ್ತದ ಬೆಳೆ ಗಣನೀಯವಾಗಿ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ.


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ 13.20 ಹೆಕ್ಟೇರ್ ಭತ್ತದ ಗುರಿಯನ್ನು ಹೊಂದಲಾಗಿದ್ದು, ಶೇ.40ರಷ್ಟು ಬಿತ್ತನೆಯಾಗಿಲ್ಲ ಎನ್ನುವ ಆತಂಕಕಾರಿ ವಿಚಾರ ಕೃಷಿಕರನ್ನು ಮಾತ್ರವಲ್ಲ ಜನಸಾಮಾನ್ಯರನ್ನು ಕಾಡುತ್ತಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಶೇ.70ರಷ್ಟು ಬಿತ್ತನೆ- ನಾಟಿ ಮುಗಿದಿದೆ. ಆದರೆ ಭತ್ತ ಯಥೇಚ್ಛ ಬೆಳೆಯುವ ರಾಯಚೂರು, ದಾವಣಗೆರೆ, ಶಿವಮೊಗ್ಗ, ಬೀದರ್, ಬಳ್ಳಾರಿ, ಕೊಪ್ಪಳ ಸೇರಿದಂತೆ ಹಲವು ಕಡೆ ಬಿತ್ತನೆ ಸಮರ್ಪಕವಾಗಿ ನಡೆದಿಲ್ಲ. ಮೇ ತಿಂಗಳಿನಲ್ಲಿ ಕರಾವಳಿ ಭಾಗದಲ್ಲಿ ಕುಚಲಕ್ಕಿ ಅಕ್ಕಿ 30 ಕೆ.ಜಿ. ಬ್ಯಾಗ್‌ಗೆ 1450-1500 ಇದ್ದ ದರ ಈಗ 1800ರ ಆಸುಪಾಸಿಗೆ ತಲುಪಿದೆ.

ಅಗತ್ಯ ವಸ್ತುಗಳ ಬೆಲೆ 2020-2021ಕ್ಕೆ ಹೋಲಿಕೆ ಮಾಡಿದರೆ ಶೇ.30-40ರಷ್ಟು ಏರಿಕೆ ಕಂಡಿದೆ. 2020ರಲ್ಲಿ 1ಕೆ.ಜಿ. ಸಕ್ಕರೆ 35ರೂ. ಆಗಿದ್ದರೆ, ಈಗ 68ಕ್ಕೆ ಏರಿಕೆಯಾಗಿದೆ. ಅದೇ ರೀತಿ ದಿನಸಿ ಹಾಗೂ ಇತರ ವಸ್ತುಗಳ ದರವೂ ಇದೇ ತೆರನಾಗಿ ಏರಿಕೆಯಾಗಿದೆ ಎನ್ನುತ್ತಾರೆ. **- ದಿನಸಿ ವ್ಯಾಪಾರಿ ಅರುಣ್‌ರಾಜ್.**

ಭತ್ತ ದಕ್ಷಿಣ ಭಾರತದ ಪ್ರಮುಖ ಆಹಾರ ಬೆಳೆಯಾಗಿದ್ದು, ಮಿಲ್‌ಗಳ ಮಾಲೀಕರ ಪ್ರಕಾರ ಅಕ್ಕಿಯ ದರ ವರ್ಷಾಂತ್ಯಕ್ಕೆ ಮತ್ತಷ್ಟು ಶೋಚನೀಯ ಸ್ಥಿತಿ ತಲುಪಬಹುದು. ಕರ್ನಾಟಕ ಮಾತ್ರವಲ್ಲದೆ ನೆರೆಯ ಕೇರಳ, ತಮಿಳುನಾಡಿನಲ್ಲೂ ಅಕ್ಕಿ ದರ ಭಾರಿ ಏರಿಕೆ ಕಂಡಿದೆ. ಮಳೆಯ ಕೊರತೆಯಿಂದ ರಾಜ್ಯ ಕಬ್ಬು ಬೆಳೆಯ ಮೇಲೂ ಬರೆ ಎಳೆದಿದ್ದು, ಇದು ಸಕ್ಕರೆ, ಬೆಲ್ಲ ಉತ್ಪಾದನೆ ಮೇಲೂ ಹೊಡೆತ ಬಿದ್ದಿದೆ. ಇದರಿಂದ ಸಕ್ಕರೆ, ಬೆಲ್ಲ ದರ ವಿಪರೀತ ಏರಿಕೆ ಕಂಡಿದ್ದು, ಗ್ರಾಹಕರನ್ನು ಕಂಗಾಲಾಗಿಸಿದೆ. ಏಪ್ರಿಲ್- ಮೇ ತಿಂಗಳಿನಲ್ಲಿ ಕೆ.ಜಿ.ಗೆ 48-50ರೂ. ನಷ್ಟಿದ್ದ ಸಕ್ಕರೆ ದರ ಆಗಸ್ಟ್ 20ರ ವೇಳೆಗೆ 68 ರೂ. ದಾಟಿದೆ. ಇದು ಮಾತ್ರವಲ್ಲದೆ ಬೆಲ್ಲದ ದರ ಕೆ.ಜಿ.ಗೆ 45ರಷ್ಟಿದ ದರ 72-75ರೂ. ಏರಿಕೆಯಾಗಿದೆ. ಅಕ್ಕಿ, ಬೆಲ್ಲ, ಸಕ್ಕರೆ ದರ ಏರಿಕೆಯಾಗಿರುವ ಮಧ್ಯೆ ತರಕಾರಿ ದರಗಳು ಕೂಡಾ ಭಾರೀ ಏರಿಕೆ ಕಂಡಿದೆ. ಕರಾವಳಿ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ಬೀನ್ಸ್ 65ರೂ., ಸುವರ್ಣಗೆಡ್ಡೆ 55 ರೂ., ಅಲಸಂಡೆ 70ರೂ., ತೊಂಡೆಕಾಯಿ 55-60ರೂ., ಕ್ಯಾರೇಟ್ 70ರೂ., ಈರುಳ್ಳಿ 55- 60ರೂ.ಗೆ, ಬೆಳ್ಳುಳ್ಳಿ 230-250ರೂ., ಬದನೆ 60ರೂ., ಗೆಣಸು 60ರೂ.ಗೆ ಏರಿಕೆಯಾಗಿದೆ.

ಅಡುಗೆ ದರ, ವಿದ್ಯುತ್ ದರ, ಪೆಟ್ರೋಲ್, ಡೀಸೆಲ್, ದವಸ- ಧಾನ್ಯಗಳ ಬೆಲೆ ಏರಿಕೆಯಿಂದ ಜನ ಈಗಾಗಲೇ ತತ್ತರಿಸಿದ್ದಾರೆ. ಈ ಮಧ್ಯೆ ಅಕ್ಕಿ, ಬೆಲ್ಲ, ಸಕ್ಕರೆ ಹಾಗೂ ತರಕಾರಿ ಬೆಲೆಗಳ ದರವೂ ಏರಿಕೆಯಾಗಿರುವುದರಿಂದ ಜನಸಾಮಾನ್ಯನ ಜೇಬಿಗೆ ಕತ್ತರಿ ಹಾಕಿದಂತಾಗಿದೆ. ಇದು ಈ ಬಾರಿಯ ಹಬ್ಬಗಳ ಸಂಭ್ರಮಕ್ಕೆ ಬರೆ ಎಳೆಯಲಿದೆ ಎನ್ನುತ್ತಾರೆ ವ್ಯಾಪಾರಿಗಳು.